ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪತ್ರಿಕೆ

ಸಂಪುಟ 10 ಸಂಚಿಕೆ 18 ಮೇ 1, 1988 ಬೆಲೆ: 1.00

ಒಳಗಿನ ಪುಟಗಳಲ್ಲಿ

ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ — ಪುಟ 4-5
* ಜಗತ್ತನ್ನು ಬದಲಿಸಿದ ಆ ಕಿರು ಹೊತ್ತಿಗೆ !
* ಮತಾಂಧರಿಗೆ ಮತ್ತೊಮ್ಮೆ ಕಾಂಗ್ರೆಸ್ (ಐ) ಶರಣು

ವಿಜ್ಞಾನ-ತಂತ್ರಜ್ಞಾನ — ಪುಟ 2
* ಸಂಪನ್ಮೂಲಗಳ ಯೋಜಿತ ಬಳಕೆಗೆ ಬಾನಿನಲ್ಲೊಂದು ಕಣ್ಣು

ದೇಶ–ವಿದೇಶ — ಪುಟ 7
* ಅಬುಜಿಹಾದ್ ಕೊಲೆ ; ವಿಶ್ವಾದ್ಯಂತ ಖಂಡನೆ
* ಫಿಲಿಪ್ಪೈನ್ಸ್ ಜನವಾದೀ ರಂಗದ ಮುನ್ನಡೆ
* ತ್ರಿಪುರಾ ಭಯೋತ್ಪಾದಕ ಸರ್ಕಾರದ ಎರಡು ತಿಂಗಳು ರೈತ ಸಂಘ-ಸಿ.ಐ.ಟಿ.ಯು. ಹೋರಾಟಗಳು ಮತ್ತಿತರ ಸುದ್ದಿಗಳು

ಪಾಲಿಟ್‌ಬ್ಯೂರೋ ಹೇಳಿಕೆ

ತೀವ್ರಗೊಳ್ಳುತ್ತಿರುವ ಸರ್ವಾಧಿಕಾರೀ ಪ್ರವೃತ್ತಿ

ಬೋಫೋರ್ಸ್ ಮತ್ತು ಸಬ್ ಮೆರಿನ್ ಹಗರಣ

ಬೋಫೋರ್ಸ್ ಮತ್ತು ಪಶ್ಚಿಮ ಜರ್ಮನಿಯ ಸಬ್ ಮೆರಿನ್ ಪ್ರಕರಣಗಳಲ್ಲಿ ಬಯಲಿಗೆ ಬಂದಿರುವ ಹೊಸ ಸಂಗತಿಗಳು ಈ ಪ್ರಕರಣಗಳನ್ನು ಮುಚ್ಚಿ ಹಾಕುವ ರಾಜೀವ್ ಸರ್ಕಾರದ ಹಾಗೂ ಜಂಟೀ ಸಂಸದೀಯ ಸಮಿತಿ ಅಧ್ಯಕ್ಷರ ಪ್ರಯತ್ನವನ್ನು ಕೊಚ್ಚಿ ಹಾಕಿವೆ. ಸಿಕ್ಕಿರುವ ಸಾಕ್ಷ್ಯಗಳನ್ನೆಲ್ಲಾ ತಳ್ಳಿ ಹಾಕಿ ವರದಿಯನ್ನು ಪೂರ್ಣಗೊಳಿಸಲು ಜಂಟೀ ಸಂಸದೀಯ ಸಮಿತಿ ಮಾಡುತ್ತಿರುವ ಪ್ರಯತ್ನ ಇಡೀ ಆಟವೇ ತಪ್ಪಿತಸ್ಥರನ್ನು ರಕ್ಷಿಸುವ ಪ್ರಯತ್ನ ಎಂಬುದು ಸಾಬೀತಾಗುತ್ತದೆ ಎಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ. ಈ ಸಮಿತಿ ಅಧ್ಯಕ್ಷ ಶಂಕರಾನಂದ್ ಭಿನ್ನಮತವನ್ನು ಸೇರಿಸಲು ಸದಸ್ಯರೊಬ್ಬರಿಗೆ ಅನುಮತಿ ನೀಡದಿದ್ದುದು ಅತಿ ವಿಶಿಷ್ಟ ಎಂದು ಖಂಡಿಸಿದೆ.

ಕೇಂದ್ರ ಸಮಿತಿ ಸಭೆಯು ಪೂರ್ವಭಾವಿಯಾಗಿ ಏಪ್ರಿಲ್ 22 ರಿಂದ 24 ರವರೆಗೆ ನಡೆದ ಪಾಲಿಟ್ ಬ್ಯೂರೋ ಸಭೆ ಅಂಗೀಕರಿಸಿದ ವರದಿಯಲ್ಲಿ ಹೀಗೆ ಹೇಳಲಾಗಿದೆ.

ಬೋಫೋರ್ಸ್ ಹಗರಣದಂತೆಯೇ ಪ. ಜರ್ಮನಿಯಿಂದ ಸಬ್ ಮೆರಿನ್‌ಗಳನ್ನು ಕೊಳ್ಳುವ ವಿಷಯದಲ್ಲಿ ನಡೆಸಿದ ಇಲಾಖಾ ವಿಚಾರಣೆ ಕೂಡ ಯಾವುದೇ ಕಮೀಷನ್ ನೀಡಲಾಗಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವುದೂ ಕೂಡ ನಿಜ ಸಂಗತಿಗೆ ವಿರೋಧವಾಗಿದೆ. ಇದು ಸತ್ಯವನ್ನು ಮರೆ ಮಾಡಲು ನಡೆಸಿರುವ ಒರಟು ಪ್ರಯತ್ನಗಳಷ್ಟೇ ಎಂದು ಎಲ್ಲರಿಗೂ ಕಾಣುವಂತಾಗಿದೆ. ದೇಶದ ಜನತೆ ಇಂತಹ ಸಿನಿಕತನದ ಪ್ರಯತ್ನಗಳಿಂದ ಮೋಸ ಹೋಗುವುದಿಲ್ಲ. ಅಪರಾಧಿಗಳೆಲ್ಲರನ್ನೂ ಶಿಕ್ಷೆಗೊಳಪಡಿಸಿದರೆ ಮಾತ್ರ ತೃಪ್ತರಾಗುತ್ತಾರೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೇಲೆ ಧಾಳಿ

ಜನಗಳಿಂದ ದೂರವಾಗುತ್ತಿರುವ ಕಾಂಗ್ರೆಸ್ (ಐ) ಕೇಂದ್ರ ಸರ್ಕಾರ ಸಂಸದೀಯ ಪ್ರಜಾಸತ್ತೆಯ ಮೇಲೆ ಬಹಿರಂಗವಾಗಿ ಧಾಳಿಗಾರಂಭಿಸಿದೆ. ಇದರ ವಿಶೇಷ ಗುರಿ ಸಿ.ಪಿ.ಐ.[ಎಂ] ಮತ್ತು ಎಡ ಪಕ್ಷಗಳ ಆಡಳಿತದಲ್ಲಿರುವ ರಾಜ್ಯಗಳು.

ತ್ರಿಪುರಾದಲ್ಲಿ

ತ್ರಿಪುರಾ ಗಲಭೆ ಪೀಡಿತ ಪ್ರದೇಶವೆಂಬ ಘೋಷಣೆಯಡಿಯಲ್ಲಿಯೇ ಮುಂದುವರೆದಿದೆ. ಅರೆಸೈನಿಕ ಪಡೆಗಳನ್ನು ಸಿ.ಪಿ.ಐ.(ಎಂ) ಹಾಗೂ ಎಡ ಪಕ್ಷಗಳ ಕಾರ್ಯಕರ್ತರನ್ನು ಸದೆ ಬಡಿ

(8ನೇ ಪುಟ ನೋಡಿ)



ಸಿ.ಕೆ.ಸಿ. ಅಧಿವೇಶನದ ಬೃಹತ್ ರೈತ ರ್ಯಾಲಿ ಬಹಿರಂಗ ಸಭೆ

ಪಕ್ಷದ ರಾಜ್ಯ ಸಮಿತಿ ಹೇಳಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು 1988 ಏಪ್ರಿಲ್ 23 ಮತ್ತು 24 ರಂದು ಹುಬ್ಬಳ್ಳಿಯಲ್ಲಿ ಕಾ॥ ಎನ್.ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದ ಸಮಿತಿಯು ರಾಜ್ಯ ಜನತಾ ಪಕ್ಷದಲ್ಲಿನ ಬಿಕ್ಕಟ್ಟು ರಾಷ್ಟ್ರಮಟ್ಟದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ರಾಜೀವ್‌ಗಾಂಧಿ ಸರ್ಕಾರದ ರಾಜೀನಾಮೆಗಾಗಿ, ಮಧ್ಯಂತರ ಚುನಾವಣೆಗಾಗಿ ಮತ್ತು ಒಂದು ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಬದಲಿಯನ್ನು ರೂಪಿಸಲು ನಡೆಸುತ್ತಿದ್ದ ಪ್ರಯತ್ನಗಳ ಮೇಲೆ ಹಾನಿಕಾರಕ ಪರಿಣಾಮ ಬೀರಲಿದೆ ಎಂದು ಅಭಿಪ್ರಾಯಪಟ್ಟಿದೆ.

ರಾಜ್ಯ ಜನತಾ ಪಕ್ಷವು ತಮ್ಮೊಳಗಿನ ವೈಯಕ್ತಿಕ ಜಗಳಗಳನ್ನು ನಿಲ್ಲಿಸಿ ಬಡಜನತೆಗೆ ಪರಿಹಾರ ದೊರಕಿಸುವ ಬಗ್ಗೆ, ರೈತರ ಮತ್ತು ಕಾರ್ಮಿಕರ ಹಿತಸಾಧನೆಯ ಬಗ್ಗೆ ಕೇಂದ್ರ ರಾಜ್ಯ ಸಂಬಂಧಗಳ ಸುಧಾರಣೆಗಾಗಿ ಹೋರಾಡುವ ಬಗ್ಗೆ ಮತ್ತು ಕೋಮುವಾದಿ ಛಿದ್ರಕಾರಿ ಶಕ್ತಿಗಳನ್ನು ಬಯಲಿಗೆಳೆದು ಹಿಮ್ಮೆಟ್ಟಿಸುವ ಬಗ್ಗೆ ಗಮನ ಕೊಡಬೇಕೆಂದು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ರಾಜ್ಯದ ಜನತಾ ಪಕ್ಷವನ್ನು ಒತ್ತಾಯಿಸಿದೆ.

ರಾಜ್ಯ ಜನತಾ ಪಕ್ಷದ ಮುಖಂಡತ್ವಕ್ಕೆ ಒಂದು ಎಚ್ಚರಿಕೆಯನ್ನು ನೀಡುತ್ತಾ, ಜನತಾ ಪಕ್ಷವು ತಮ್ಮೊಳಗೆ ಐಕ್ಯತೆಯನ್ನು ಸಾಧಿಸದೆ ಹೋದರೆ ಮತ್ತು ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಕಂಕಣ ಬದ್ಧವಾಗಿ ನಿಲ್ಲದೆ ಹೋದರೆ ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ರಾಜ್ಯದ ಜನತೆ ವ್ಯಕ್ತಪಡಿಸಿದ ವಿಶ್ವಾಸಕ್ಕೆ ದ್ರೋಹ ಮಾಡಿದಂತಾಗುವುದು ಎಂದು ಸಿ.ಪಿ.ಐ. (ಎಂ) ರಾಜ್ಯಸಮಿತಿ ಅಭಿಪ್ರಾಯಪಟ್ಟಿದೆ.

ಕಾಂಗ್ರೆಸ್ (ಐ) ಪಕ್ಷವು ದೇಶದಲ್ಲೆಲ್ಲಾ ಯಾವ ಮುಚ್ಚುಮರೆ ಇಲ್ಲದೆ ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳೊಂದಿಗೆ ಕೂಡಿಕೊಳ್ಳುತ್ತಿದೆ. ತ್ರಿಪುರಾದಲ್ಲಿ ಛಿದ್ರಕಾರಿ ಶಕ್ತಿಗಳೊಂದಿಗೆ ಸೇರಿಕೊಂಡು, ಸೈನ್ಯವನ್ನು ಉಪಯೋಗಿಸಿ ಅಧಿಕಾರಕ್ಕೆ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ) ಅಖಿಲಭಾರತ ಮುಖಂಡರು ಗೂರ್ಖಾಲ್ಯಾಂಡ್ ಛಿದ್ರಕಾರಿಗಳಿಗೆ ಪ್ರಚೋದನೆ ನೀಡುತ್ತಿದ್ದಾರೆ. ಕೇರಳದಲ್ಲಿ ಎಲ್ಲಾ ಜಾತಿವಾದಿ ಮತ್ತು ಕೋಮುವಾದಿ ಶಕ್ತಿಗಳೊಂದಿಗೆ ಕಾಂಗ್ರೆಸ್ (ಐ) ಸೇರಿಕೊಂಡಿದೆ. ಕೇಂದ್ರದಲ್ಲಿ

(ಎಂಟನೇ ಪುಟ ನೋಡಿ)

ಚಿಕಾಗೋ ಘಟನೆ

ಆವತ್ತು,
ಅವರ ಮೈಯಿಂದ
ಹರಿದ
ರಕ್ತ ಕಾಲುವೆಯಲ್ಲಿ
ಈಗ
ತೇಲುತ್ತಿದೆ
ನೂರಾರು ಹಡಗುಗಳು
ಲೆಕ್ಕವಿಲ್ಲದಷ್ಟು ಕಮಲಗಳು
ಪ್ರಯಾಣಿಕರು–
ನಕ್ಕು
ಹತ್ತುತ್ತಾರೆ ಹಡಗು
ಇಳಿಯುತ್ತಾರೆ ದಡಕ್ಕೆ.
ಕಮಲ ಅರಳುತ್ತವೆ
ಹಡಗುಗಳು ಚಲಿಸುತ್ತವೆ.

—ನೀಲಾ ಕೆ.

ಬೀದರ್



ಸಂಪನ್ಮೂಲಗಳ ಯೋಜಿತ ಬಳಕೆಗೆ

ಬಾನಿನಲ್ಲೊಂದು ಕಣ್ಣು

ಭಾರತದಂತಹ ದೊಡ್ಡ ದೇಶದಲ್ಲಿ ಬೆಳವಣಿಗೆಯ ಯೋಜನೆಗೆ ಬೇಕಾದ ಅಂಕಿ ಸಂಖ್ಯೆಗಳನ್ನು ಕಲೆ ಹಾಕುವುದು-ಅದರಲ್ಲೂ ಸಮಯಕ್ಕೆ ಸರಿಯಾಗಿ-ಬಹಳ ಕಷ್ಟದ ಕೆಲಸ. ಇದರಲ್ಲಿ ಮುಖ್ಯವಾಗಿ ಕೃಷಿಗೆ ಸಂಬಂಧಪಟ್ಟಂತೆ ಕಷ್ಟಗಳು ಇನ್ನೂ ಹೆಚ್ಚು. ದೇಶದಲ್ಲಿ ಕಾಡುಗಳ ವಿಸ್ತೀರ್ಣ ಎಷ್ಟು. ಎಷ್ಟರ ಮಟ್ಟಿಗೆ ಬೆಳೆಯುತ್ತಿರುವ ಬೆಳೆಗಳು ಬೇರೆ ಬೇರೆ ಹಂತದಲ್ಲಿ ಆರೋಗ್ಯಕರವಾಗಿವೇ? ಈ ವರ್ಷ ಎಷ್ಟು ಬೆಳೆ ತೆಗೆಯಬಹುದು? ಬರ ಅಥವಾ ನೆರೆ ಪೀಡಿತ ಪ್ರದೇಶಗಳು ಯಾವುವು? ಅವುಗಳ ನಿಖರವಾದ ವಿಸ್ತೀರ್ಣ ಎಷ್ಟು? ಬಂಜರುಭೂಮಿ ಎಷ್ಟಿದೆ? ಅದರಲ್ಲಿ ಎಷ್ಟನ್ನು ಕೃಷಿಯೋಗ್ಯ ಮಾಡಬಹುದು? ಇವುಗಳ ಬಗ್ಗೆ ಕಾಲಕಾಲಕ್ಕೆ ನಿಖರವಾದ ಅಂಕೆ-ಸಂಖ್ಯೆಗಳು ಯೋಜನೆಗೆ ಅಗತ್ಯವಾದವು. ಇವುಗಳ ಬಗ್ಗೆ ಈಗ ಸಿಗುವ ಅಂಕೆ ಸಂಖ್ಯೆಗಳು ಸಮಯಕ್ಕೆ ಸರಿಯಾಗಿ ಸಿಗುವುದಿಲ್ಲ; ಉದಾ:- ಬರ ಅಥವಾ ನೆರೆ ಪೀಡಿತ ಪ್ರದೇಶಗಳ ಬಗ್ಗೆ ಹೆಚ್ಚು ಕಡಿಮೆ ಈ ಅನಾಹುತಗಳ ಪರಿಣಾಮ ವ್ಯಾಪಕವಾದ ಮೇಲೆ ಇದರ ಬಗ್ಗೆ ತಿಳಿಯುವುದು, ಇಲ್ಲವೆ ಅಂಕೆ ಸಂಖ್ಯೆಗಳು ನಿಖರವಾಗಿರುವುದಿಲ್ಲ. ಉಪಯೋಗಿಸಲರ್ಹವಾಗಿರುವುದಿಲ್ಲ; ಉದಾ:- ಇತ್ತೀಚಿನ ವರೆಗೆ ಕಾಡುಗಳ ವಿಸ್ತೀರ್ಣದ ಬಗ್ಗೆ, ನಿಖರವಾದ ಮಾಹಿತಿ ಇರಲಿಲ್ಲ. ಇದಲ್ಲದೆ ಹೆಚ್ಚಿನ ಅಂಕೆ-ಸಂಖ್ಯೆಗಳು ಒಂದು ಬಾರಿ ಸಂಗ್ರಹಿಸಿದರೆ ಸಾಕಾಗುವುದಿಲ್ಲ. ಸತತವಾಗಿ ಇದು ಬದಲಾಗುತ್ತಿರುವುದರಿಂದ ಅಂಕೆ-ಸಂಖ್ಯೆ ಸಂಗ್ರಹ ಒಂದು ಸತತ ಕೆಲಸ. ಈ ಮೇಲೆ ಹೇಳಿದ ವಿಷಯಗಳ ಬಗ್ಗೆ ಇದು ಬಹಳ ದುಬಾರಿ ಕೆಲಸ. ಇದನ್ನು ಕೈಗೊಂಡರೂ ಸಮಯಕ್ಕೆ ಸರಿಯಾಗಿ ದೊರಕುತ್ತವೆ ಎಂದು ಹೇಳುವುದು ಕಷ್ಟ.

ಬಾನಿನಲ್ಲೊಂದು ಠಾಣೆ ಸ್ಥಾಪಿಸಿ ದೇಶದ ಪ್ರತಿಯೊಂದು ಮೈಲಿ-ಮೈಲಿ ಜಾಗವನ್ನು ನೋಡುವುದು ಸಾಧ್ಯವಿದ್ದರೆ ಎಷ್ಟು ಚೆನ್ನ. ಇದು ಈಗ ಕನಸು ಕಾಣುವ ಸಂಗತಿ ಅಲ್ಲ. ಮಾರ್ಚ್ 17 ರಂದು ಸೋವಿಯೆತ್ ಒಕ್ಕೂಟದ ಕಝಕ್‌ಸ್ತಾನ್ ಪ್ರಾಂತ್ಯದ ಬೈಕಾನೂರು ಉಡಾವಣಾ ಕೇಂದ್ರದಿಂದ ಉಡಾಯಿಸಲಾದ ಭಾರತೀಯ ಉಪಗ್ರಹ IRS-IA ಇಂತಹ ಕನಸನ್ನು ನನಸು ಮಾಡಿದೆ. ಸುಮಾರು 900 ಕಿ.ಮಿ. ಎತ್ತರದಲ್ಲಿ ಭೂಮಿಗೆ ಸುತ್ತುಹೊಡೆಯುವ ಈ ಉಪಗ್ರಹ ಇಡೀ ಭಾರತದ ಭೂಮಿ ಮತ್ತು ಸಮುದ್ರ, ಪ್ರದೇಶದ ಒಂದು ಚದರ ಮೈಲು ಬಿಡದೆ-ಫೋಟೋ ಹಿಡಿದು ಭೂಮಿಗೆ ರೇಡಿಯೋ ತರಂಗಗಳ ಮೂಲಕ ಕಳಿಸುತ್ತದೆ.

'ದೂರ ಸಂವೇದಿ' ಉಪಗ್ರಹ

ಇಂತಹ ಉಪಗ್ರಹಗಳಿಗೆ 'ದೂರ ಸಂವೇದಿ' ಉಪಗ್ರಹಗಳೆನ್ನುತ್ತಾರೆ. IRS-IA ದೂರ ಸಂವೇದಿ ಉಪಗ್ರಹ ಇಡೀ ಭಾರತದ ಭೂಮಿ ಮತ್ತು ಸುತ್ತಮುತ್ತಲ ಸಮುದ್ರ ಪ್ರದೇಶಗಳ ಫೋಟೋ ಹಿಡಿಯಲು 22 ದಿನಗಳನ್ನು ತೆಗೆದುಕೊಳ್ಳುತ್ತದೆ. ಅಂದರೆ ದೇಶದ ಯಾವುದೇ ಜಾಗದ ಫೋಟೋ 22 ದಿನಗಳಿಗೊಮ್ಮೆ ಪುನಃ ಸಿಗುತ್ತದೆ. ಸತತವಾಗಿ ಈ ಉಪಗ್ರಹದ ಜೀವನಾವಧಿಯಾದ 3 ವರ್ಷಗಳು ನಮಗೆ ದೇಶದ ಎಲ್ಲಾ ಭಾಗಗಳ ಫೋಟೋಗಳು ಸಿಗುತ್ತವೆ. ಅಷ್ಟು ಹೊತ್ತಿಗೆ ಇನ್ನೊಂದು ಇಂತಹುದೇ ಉಪಗ್ರಹವನ್ನು ಹಾರಿಸಲಾಗುತ್ತದೆ. ಇನ್ನು ಮೇಲೆ ಸತತವಾಗಿ 'ದೂರ ಸಂವೇದಿ' ಉಪಗ್ರಹಗಳ ಸೌಲಭ್ಯವಿರುತ್ತದೆ.

ಉಪಗ್ರಹಗಳ ಮೂಲಕ ಮಾಡಬಹುದಾದ ಇಡೀ ದೇಶದ ಈ 'ಸರ್ವೆ' ಕಾರ್ಯವನ್ನು ಭೂಮಿಯ ಮೇಲೆ ಹಳೆಯ ಕ್ರಮಗಳಿಂದ (ಅಂದರೆ ಸರ್ವೇ ಮಾಡುವ ಮೂಲಕವೇ) ಮಾಡಲಾಗುತ್ತಿದೆ. ಅಥವಾ ಕ್ಯಾಮರಾಗಳನ್ನು ಹೊತ್ತ ವಿಮಾನಗಳಿಂದಲೂ ಮಾಡಬಹುದು. ಉಪಗ್ರಹಗಳಿಂದ ಈ 'ಸರ್ವೇ' ಮಾಡುವುದು ದುಬಾರಿ ಎಂದು ನೀವು ತಿಳಿದಿದ್ದರೆ ನಿಮಗೆ ಆಶ್ಚರ್ಯ ಕಾದಿದೆ. ಪ್ರತಿ ಚದರ ಮೈಲು ಸರ್ವೇಗೆ ಹಳೆಯ ಕ್ರಮಗಳ ಪ್ರಕಾರ 53 ರೂ. ಖರ್ಚಾದರೆ, ವಿಮಾನಗಳಿಂದ 13 ರೂ. 'ದೂರ ಸಂವೇದಿ' ಉಪಗ್ರಹಗಳಿಂದ 14ರೂ. ಖರ್ಚಾಗುತ್ತದೆ. ಇದಲ್ಲದೆ ಸತತವಾಗಿ 22 ದಿನಗಳಿಗೊಮ್ಮೆ ಅಂಕೆ ಸಂಖ್ಯೆ ಸರಬರಾಜು ಅದರ ನಿಖರತೆ ಗಮನಿಸಿದರೆ ಉಪಗ್ರಹಗಳ ಉಪಯೋಗ ಇನ್ನೂ ಅರ್ಥಪೂರ್ಣ.

ಜಗತ್ತಿನಲ್ಲಿ ಇಂತಹ ದೂರ ಸಂವೇದಿ ಉಪಗ್ರಹ ಹೊಂದಿರುವ ಐದನೇ ದೇಶ ಭಾರತವಾಗಿದೆ. ಉಳಿದ ನಾಲ್ಕು ದೇಶಗಳು ಅಮೆರಿಕಾ, ಸೋವಿಯೆತ್ ಒಕ್ಕೂಟ, ಫ್ರಾನ್ಸ್, ಚೀನಾ. ಇದು ದೇಶಕ್ಕೆ ಹೆಮ್ಮೆಯ ವಿಷಯ. ಈ ಇಡೀ ಉಪಗ್ರಹವನ್ನು ಹೆಚ್ಚು ಕಡಿಮೆ ದೇಶದಲ್ಲೇ ವಿನ್ಯಾಸ ಮಾಡಿ, ತಯಾರಿಸಿದ್ದು ಇನ್ನೂ ಹೆಗ್ಗಳಿಕೆಯ ವಿಷಯ.

ಈ ಉಪಗ್ರಹ ಸತತವಾಗಿ ಕಳಿಸುವ ಫೋಟೋಗಳನ್ನು ವಿಶ್ಲೇಷಿಸಿ, ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ, ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅಷ್ಟೇನೂ ಸುಲಭದ ವಿಷಯವಲ್ಲ. ಇದಕ್ಕೆ ಕಂಪ್ಯೂಟರ್‌ಗಳನ್ನು ಉಪಯೋಗಿಸಲಾಗುತ್ತಿದೆ. ಉದಾಹರಣೆಗೆ ಕಾಡಿನ ವಿಸ್ತೀರ್ಣ ನಿರ್ಧರಿಸುವುದು ನೇರ ಸರಳ ಉಪಯೋಗವಾದರೆ, ಬರಪೀಡಿತ ಪ್ರದೇಶಗಳಲ್ಲಿ ಭೂಗತ ನೀರಿನ ಬುಗ್ಗೆಗಳನ್ನು ಕಂಡುಹಿಡಿಯುವುದು ಅಷ್ಟೇನೂ ಸುಲಭವಲ್ಲ. ಇದೇ ರೀತಿ ಭತ್ತ, ಗೋಧಿ ಮುಂತಾದ ಬೆಳೆಗಳ ಬೆಳವಣಿಗೆಯ ಬೇರೆ ಬೇರೆ ಹಂತಗಳಲ್ಲಿ ಗಮನಿಸಿ, ರೋಗಗ್ರಸ್ತವಾದರೆ ಅದನ್ನು ಕಂಡುಹಿಡಿಯುವುದು ಮತ್ತು ಒಟ್ಟು ಬೆಳೆಯ ಉತ್ಪಾದನೆಯ ಅಂದಾಜು ಮಾಡುವುದೂ ಸಾಧ್ಯ. ಆದರೂ ಈ ದಿಕ್ಕಿನಲ್ಲಿ ಸಾಕಷ್ಟು ಕೆಲಸವಾಗಬೇಕಾಗಿದೆ.

ಕೇಂದ್ರ ಮತ್ತು ಹಲವು ರಾಜ್ಯ ಸರ್ಕಾರಗಳ ಕೃಷಿ ಮುಂತಾದ ಇಲಾಖೆಗಳು ಮತ್ತಿತರ ಸಂಶೋಧನಾ ಸಂಸ್ಥೆಗಳು ಉಪಗ್ರಹ ಕಳಿಸುವ ಮಾಹಿತಿಯನ್ನು ಉಪಯೋಗಿಸಲು ಹಲವು ಯೋಜನೆಗಳನ್ನು ಹಾಕಿಕೊಂಡಿವೆ. ಇಂತಹ ಸುಮಾರು 16 ಯೋಜನೆಗಳಲ್ಲಿ 8 ಭರದಿಂದ ಸಾಗಿವೆ ಎಂದು ತಿಳಿದು ಬಂದಿದೆ.

ಆದರೆ ಉಪಗ್ರಹ ಕಳಿಸುವ ಮಾಹಿತಿ ಸಮಸ್ಯೆಯನ್ನು ತಂತಾನೆ ಪರಿಹಾರ ಮಾಡುತ್ತದೆ ಎಂದು ತಿಳಿಯುವುದು ತಪ್ಪು. ಇಂತಹ ಮಾಹಿತಿಗಳನ್ನು ವಿಶ್ಲೇಷಿಸಿ. ತಕ್ಕ ತೀರ್ಮಾನಗಳಿಗೆ ಬಂದು ಅದನ್ನು ಜಾರಿ ಮಾಡುವುದು ಅಗತ್ಯ. ಇಂತಹ ತೀರ್ಮಾನಗಳಿಗೆ ವೈಜ್ಞಾನಿಕವಾಗಿ ಬಹಳ ಬೇಗ ಬರಲು ಉಪಗ್ರಹದ ಮಾಹಿತಿ ಸಾಧ್ಯ ಮಾಡಿಸಿದೆ. ಯೋಜನೆಗಳಲ್ಲಿ 'ಅಂದಾಜು' ಬದಲು ನಿಖರ ಅಂಕೆ-ಸಂಖ್ಯೆ ಉಪಯೋಗಿಸಲು ಸಾಧ್ಯವಾಗುತ್ತದೆ.

IRS-IA ಹೇಗೆ ಕೆಲಸ ಮಾಡುತ್ತದೆ.

ಗಗನದಲ್ಲಿ ಗಿರಕಿ ಹೊಡೆಯುತ್ತಿರುವ ಉಪಗ್ರಹದ ಮುಖ್ಯ ಭಾಗ 3 ಕ್ಯಾಮರಾಗಳು. ಈ ಕ್ಯಾಮರಾಗಳು ವಿಶಿಷ್ಟವಾದ ಕ್ಯಾಮರಾಗಳು ಇವು ಕಣ್ಣಿಗೆ ಕಾಣುವ ಬೆಳಕು ಮಾತ್ರವಲ್ಲದೆ, ಕಣ್ಣಿಗೆ ಕಾಣದ ಪ್ರತಿವಸ್ತು ಬೀರುವ 'ಉಷ್ಣಕಿರಣ'ಗಳ ಫೋಟೋ ಸಹ ಹಿಡಿಯುತ್ತದೆ, ಉಷ್ಣಕಿರಣಗಳು ವಸ್ತುವನ್ನು ಗುರುತಿಸಲು ಹೆಚ್ಚಿನ ಮಾಹಿತಿ ನೀಡುತ್ತವೆ. ಕ್ಯಾಮರಾಗಳು ಒಂದು ಬಾರಿಗೆ ಸುಮಾರು 148 ಕಿ. ಮಿ. ಪ್ರದೇಶವನ್ನು 'ನೋಡು'ತ್ತಲೆ ಗುರುತಿಸಬಲ್ಲದು.

ಇಡೀ ಉಪಗ್ರಹದ ಇಲೆಕ್ಟ್ರಾನಿಕ್ ಭಾಗಗಳಿಗೆ ಸೂರ್ಯನ ಬೆಳಕಿನಿಂದ ವಿದ್ಯುತ್ ತಯಾರಿಸುವ ಸುಮಾರು 11 ಮೀಟರ್ ಉದ್ದದ ಸೌರ ಬ್ಯಾಟರಿ ಶಕ್ತಿ ಒದಗಿಸುತ್ತವೆ. ಸೂರ್ಯಗ್ರಹಣದ ಸಮಯಕ್ಕೆ ಮಾತ್ರ ಉಪಯೋಗಿಸಲು ಅಲ್ಪಶಕ್ತಿಯ ಬ್ಯಾಟರಿ ಸಹ ಇರುತ್ತದೆ.

ಉಪಗ್ರಹ ತಾನು ಹಿಡಿದ ಫೋಟೋಗಳನ್ನು ವಿದ್ಯುತ್ ತರಂಗಗಳಾಗಿ ಪರಿವರ್ತಿಸಿ ರೇಡಿಯೋ ಮೂಲಕ ಭೂಮಿಗೆ ಕಳಿಸುತ್ತದೆ. ಇದನ್ನು ಸೆರೆ ಹಿಡಿದು ವಿದ್ಯುತ್ ತರಂಗಗಳನ್ನು ಪುನಃ ಫೋಟೋ, ಕಂಪ್ಯೂಟರ್‌ಗೆ ನೇರವಾಗಿ ಕೊಡಬಹುದಾದ ಟೇಪುಗಳು ಇತ್ಯಾದಿಯಾಗಿ ಪರಿವರ್ತಿಸುವುದು ದೇಶದ ಎರಡು-ಮೂರು ನಗರಗಳಲ್ಲಿರುವ ಭೂಕೇಂದ್ರಗಳ ಕೆಲಸ.

ಇದಲ್ಲದೆ ಉಪಗ್ರಹದ ಸುತ್ತು ಹೊಡೆಯುವ ದಾರಿ, ಕ್ಯಾಮರಾಗಳು ಭೂಮಿಯ ಕಡೆಗೆ ತಿರುಗಿರುವಂತೆ ಅದರ ಚಲನೆ, ಉಪಗ್ರಹಗಳಲ್ಲಿರುವ ಹಲವಾರು ಉಪಕರಣಗಳನ್ನು ನಿಯಂತ್ರಿಸಲು ರೇಡಿಯೋ ಮೂಲಕ ಆಜ್ಞೆ ನೀಡಲು ಒಂದು ಕೇಂದ್ರ ಭೂಮಿಯಲ್ಲಿರುತ್ತದೆ. ಇದಕ್ಕೆ ಬೇಕಾದ ರೇಡಿಯೋ ಗ್ರಾಹಕ ಉಪಗ್ರಹದಲ್ಲಿರುತ್ತದೆ.

ಉಪಗ್ರಹ ಭೂಮಿಯ ಉತ್ತರ ಧ್ರುವದಿಂದ ದಕ್ಷಿಣ ಧ್ರುವದ ಕಡೆ ಸುತ್ತು ಹೊಡೆಯುತ್ತಿರುತ್ತದೆ. ಭೂಮಿಯ ಸುತ್ತ ಒಂದು ಸುತ್ತು ಹಾಕಲು 103 ನಿಮಿಷ ತೆಗೆದುಕೊಳ್ಳುತ್ತದೆ. ಅಂದರೆ ಒಂದು ದಿನಕ್ಕೆ ಸುಮಾರು 14 ಸುತ್ತುಗಳನ್ನು ಹೊಡೆಯುತ್ತದೆ. ಭೂಮಿಯು ತನ್ನ ಅಕ್ಷದ ಸುತ್ತ ತಿರುಗುವುದರಿಂದ ಉಪಗ್ರಹ ಸುಮಾರು 307 ಸುತ್ತು ಹೊಡೆಯುವಾಗ ಇಡೀ ಭಾರತ ದೇಶದ ಭೂಭಾಗವನ್ನು ಫೋಟೋ ಹಿಡಿದಿರುತ್ತದೆ. ಇದಕ್ಕೆ 22ದಿನಗಳು ಬೇಕಾಗುತ್ತದೆ, ಉಪಗ್ರಹ ಒಂದು ಜಾಗದ ಮೇಲೆ ಸುಮಾರು ಒಂದೇ ಸಮಯಕ್ಕೆ ಬರುವ ಹಾಗೆ ಈ ಸುತ್ತುಗಳನ್ನು ವ್ಯವಸ್ಥೆ ಮಾಡಲಾಗಿದೆ.

ಉಪಗ್ರಹದ ಕ್ಯಾಮರಾಗಳು ಭೂಮಿಯತ್ತ ಮುಖ ಮಾಡಿರುವುದು ಬಹಳ ಮುಖ್ಯ. ಅಲ್ಲದೆ ಉಪಗ್ರಹ ಭೂಮಿಯ ಸುತ್ತುವ ಸುತ್ತು ಅದು ಯಾವಾಗಲೂ ಸೂರ್ಯಾಭಿಮುಖವಾಗಿರುವಂತೆ ಸಹ ನೋಡಿಕೊಳ್ಳಬೇಕು. ಇದಕ್ಕಾಗಿ ಭೂಮಿ, ಸೂರ್ಯ, ಕೆಲವು ನಕ್ಷತ್ರಗಳನ್ನು ಗುರುತಿಸಿ ಉಪಗ್ರಹ 'ದಾರಿ' ತಪ್ಪದಂತೆ ನೋಡಲು ಉಪಗ್ರಹ ಬಹಳ ಸಂಕೀರ್ಣವಾದ ಸ್ವ-ನಿಯಂತ್ರಿತ ವ್ಯವಸ್ಥೆ ಹೊಂದಿರುತ್ತದೆ. ಇದು ತಯಾರಿಸಲು ಬಹಳ ಕಷ್ಟಸಾಧ್ಯ. ಇದರ ವಿನ್ಯಾಸ ಭಾರತೀಯ ವಿಜ್ಞಾನಿಗಳ ಹೆಮ್ಮೆಯ ಸಾಧನೆ ಎನ್ನಲಾಗಿದೆ.

ಉಪಗ್ರಹದ ತೂಕ ಸುಮಾರು 980ಕಿಲೋ ಗ್ರಾಂ (ಅಥವಾ ಹೆಚ್ಚು ಕಡಿಮೆ ಒಂದು ಟನ್ನು)

ಸ್ವಾವಲಂಬನೆಯಲ್ಲಿ ಒಂದು ಪಾಠ

IRS-1A ದೂರ ಸಂವೇದಿ ಉಪಗ್ರಹದ ಸಫಲ ಕಾರ್ಯನಿರ್ವಹಣೆ ಭಾರತ ಬಾಹ್ಯಾಕಾಶ ಕಾರ್ಯಕ್ರಮದ ಒಂದು ಪ್ರಮುಖ ಮೈಲಿಗಲ್ಲು. ಬಾಹ್ಯಾಕಾಶ ಕಾರ್ಯಕ್ರಮದ ಬೆಳ್ಳಿಹಬ್ಬದ ವರ್ಷದಲ್ಲೊಂದು ತಕ್ಕ ಕಾಣಿಕೆ. ಇಷ್ಟರವರೆಗಿನ ಉಪಗ್ರಹಗಳೆಲ್ಲಾ ಪ್ರಯೋಗಾತ್ಮಕ ಉಪಗ್ರಹಗಳಾಗಿದ್ದು, ಇದು ಪ್ರಥಮ ಉಪಯುಕ್ತ ಉಪಗ್ರಹ.

ಈ ಉಪಗ್ರಹದಲ್ಲಿ ಕ್ಯಾಮರಾದ ಕೆಲವು ಭಾಗಗಳನ್ನು ಬಿಟ್ಟರೆ, ಎಲ್ಲಾ ಭಾಗಗಳೂ ದೇಶದಲ್ಲೇ ವಿವಿಧ ಸಂಶೋಧ ಸಂಸ್ಥೆಗಳು ಕೈಗಾರಿಕೆಗಳು ವಿನ್ಯಾಸ ಮಾಡಿ ತಯಾರಿಸಿರುವುವು. ಉಪಗ್ರಹದ ಪರೀಕ್ಷೆಗೆ ಬಹುಭಾಗ ದೇಶದಲ್ಲೇ ನಡೆದಿದೆ. ಇದು ಬಾಹ್ಯಾಕಾಶ ವಿಭಾಗದ ಸಮರ್ಥ ನಿರ್ದೇಶನದಲ್ಲಿ ಸಾಧ್ಯವಾಗಿದೆ. ಇಂದಿನ ಜಗತ್ತಿನಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಬಹಳ ಮೌಲ್ಯದ ಕಷ್ಟಸಾಧ್ಯ. ಉನ್ನತತಂತ್ರಜ್ಞಾನವಾಗಿದ್ದು ಇದರ ಬಗ್ಗೆ ಮಾಹಿತಿ ಅಭಿವೃದ್ಧಿ ದೇಶಗಳಿಂದ ದೊರಕುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸ್ವಾವಲಂಬಿತ ತಂತ್ರಜ್ಞಾನ ಬೆಳವಣಿಗೆ ಸಾಧ್ಯ ಎಂದು ಬಾಹ್ಯಾಕಾಶ ಕಾರ್ಯಕ್ರಮ ತೋರಿಸಿಕೊಟ್ಟಿದೆ. ಇಂತಹುದೇ ಉದಾಹರಣೆ ಅಣುಶಕ್ತಿ ಕಾರ್ಯಕ್ರಮದಲ್ಲಿ ನೋಡಬಹುದು. ಸ್ವಾವಲಂಬನೆಯ ಬಗ್ಗೆ ಇದೇ ಕಾಳಜಿ ನಮ್ಮನ್ನಾಳುವ ವರ್ಗಗಳ ಸರ್ಕಾರ ಇತರ ಕ್ಷೇತ್ರಗಳಲ್ಲಿ ತೋರಿಸಿಲ್ಲ. ಉದಾ-ತೈಲ, ಉಕ್ಕು, ಬೂರ್ಜ್ವಾ–ಭೂಮಾಲಕ ಆಳುವ ವರ್ಗಗಳು ಅನಿವಾರ್ಯವಾದಾಗ ಮಾತ್ರ ಸ್ವಾವಲಂಬನೆಗೆ ಶರಣು ಹೊಡೆಯುತ್ತವೆಯೇ? ಅಥವಾ ಸ್ವಾವಲಂಬನೆಗೆ ವಿರುದ್ಧವಾದ ಹಾದಿಯಲ್ಲಿ ಹೋಗಲು ಅವುಗಳ ಮೇಲೆ ಇರುವ ಒತ್ತಡವನ್ನು ಅನಿವಾರ್ಯ ಕ್ಷೇತ್ರಗಳಲ್ಲಿ ಮಾತ್ರ ವಿರೋಧಿ

(6ನೇ ಪುಟ ನೋಡಿ)

ಲಾರಿ ಚಾಲಕರ ಯಶಸ್ವಿ ಹೋರಾಟ

ಮೈಸೂರು ಜಿಲ್ಲೆ ಚಾಮರಾಜನಗರದ ಎಕ್ಸ್‌ಪ್ರೆಸ್ ಟ್ರಾನ್ಸ್‌ಪೋರ್ಟ್‌ನಿಂದ ಲಾರಿ ಮಾಲೀಕ ಸಿಐಟಿಯುವಿಗೆ ಸೇರಿದ ಲಾರಿ ಮೋಟಾರ್ ವರ್ಕರ್ಸ್ ಯೂನಿಯನ್‌ನ ಚಾಲಕನೊಬ್ಬನಿಗೆ 15ವರ್ಷದ ದುಡಿಮೆ ಪರಿಹಾರ ಕೇಳಿ ಕಾರ್ಮಿಕ ಸಂಧಾನ ಅಧಿಕಾರಿಗಳಿಗೆ ದೂರು ಸಲಿಸಿತು.

ಸಂಘದ ಚಾಲಕರು ಮಾಲೀಕನ ಹಟಮಾರಿತನದ ವಿರುದ್ಧ ಮಾಲೀಕನ ಮನೆ ಮುಂದೆ ಮೆರವಣಿಗೆ ನಡೆಸಿದರು, ಜನವರಿ 24ರಂದು ಲಾರಿ ತಡೆ ಚಳುವಳಿ ನಡೆಸಿದರು. ಬಂಧನ, ಮುಷ್ಕರಗಳು ಮುಂದುವರೆದವು, ಜಿಲ್ಲಾ ಕಛೇರಿ ಮುಂದೆ ಜನವರಿ 29ರಂದು ಸತ್ಯಾಗ್ರಹ ನಡೆಸಲಾಯಿತು. ಫೆಬ್ರವರಿ 6 ರಂದು ಒಂದು ಸಂಧಾನವಾಗಿ 13,500ರೂಪಾಯಿಗಳ ಪರಿಹಾರವನ್ನು ಮಾಲೀಕ ಕೊಡಲು ಒಪ್ಪಿ ಸಹಿ ಹಾಕಲಾಯಿತು.

ಕೃಷಿ ಕೂಲಿಕಾರರಿಗೆ ವಂಚಿಸಿದ ಜನತಾ ನಾಯಕ

ಜನತಾ ಸರ್ಕಾರದ ಕೂಲಿಗಾಗಿ ಕಾಳು ಯೋಜನೆ ಅಡಿಯಲ್ಲಿ ದುಡಿವ ಕೃಷಿ ಕೂಲಿಕಾರರಿಗೆ ನೀಡಲು ಮಂಜೂರಾಗಿದ್ದ 800 ಮೂಟೆ ಅಕ್ಕಿ ಗೋಧಿಯನ್ನು ಯಲಬುರ್ಗಾ ತಾಲ್ಲೋಕಿನ ಯುವ ಜನತಾ ಪಕ್ಷದ ಸಂಘಟನಾ ಕಾರ್ಯದರ್ಶಿಯಾದ ಶ್ರೀ ಸಿದ್ದಣ್ಣ ಪಟ್ಟಣಶೆಟ್ಟಿ ಅಕ್ರಮವಾಗಿ ದಾಸ್ತಾನು ಮಾಡಿ ಜನರಿಗೆ ವಂಚಿಸಿದ ಘಟನೆ ವರದಿಯಾಗಿದೆ.

ಕೃಷಿ ಕೂಲಿಕಾರರಿಂದ ದುಡಿಸಿಕೊಂಡ ಈ ಮಹಾಶಯ ಅವರ ದುಡಿಮೆಯ ಅನ್ನವನ್ನೇ ಕಿತ್ತುಕೊಂಡು ನೀಚ ಕೃತ್ಯವೆಸಗಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕುಷ್ಟಗಿ ತಾಲ್ಲೋಕು ಸಮಿತಿ ಹಾಗೂ ರಾಯಚೂರು ಜಿಲ್ಲಾಸಮಿತಿಗಳು ಉಗ್ರವಾಗಿ ಖಂಡಿಸಿವೆ,

ಯಲಬುರ್ಗಾ ತಾಲ್ಲೋಕಿನ ಹಿರೇಅರಳಿಗ್ರಾಮದ ಸರ್ಕಾರಿ ಹೈಸ್ಕೂಲ್‌ನಲ್ಲಿ ಬಚ್ಚಿಟ್ಟಿದ್ದ 800 ಮೂಟೆ ಅಕ್ಕಿ-ಗೋಧಿಯನ್ನು ರೈತರು ಶೋಧಿಸಿ ಪೊಲೀಸ್‌ರಿಂದ ಆ ಮೂಟೆಗಳನ್ನು ಸೀಜ್ ಮಾಡಿಸಲಾಯಿತು, ಕುಷ್ಟಗಿ ತಾಲೋಕಿನಲ್ಲಿಯು ಇದೇ ವ್ಯಕ್ತಿ 'ಕೂಲಿಗಾಗಿ ಕಾಳು' ಯೋಜನೆಯ 1000 ಮೂಟೆ ಅಕ್ಕಿ-ಗೋಧಿ ದಾಸ್ತಾನು ಮಾಡಿ ವಂಚಿಸಿದಾಗಿ ತಿಳಿದು ಬಂದಿದೆ. ಇಂತಹ ಸಮಾಜದ್ರೋಹಿ ಸಿದ್ದಣ ಪಟ್ಟಣಶೆಟ್ಟಿಯ ವಿರುದ್ಧ ಪೊಲೀಸರು ಯಾವುದೇ ಕ್ರಮವನ್ನು ಜರುಗಿಸದೇ ಜನರಿಗೆ ಅಕ್ಕಿ-ಗೋಧಿಯನ್ನು ಹಂಚದಿರುವುದನ್ನು ಖಂಡಿಸಿ ಅಧಿಕಾರಿಗಳು ಇವನ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ರೈತ ಸಂಘ ಒತ್ತಾಯಿಸಿದೆ,

ಕನಿಷ್ಟ ವೇತನ ವೃದ್ಧಾಪ್ಯ ವೇತನಕ್ಕೆ ಆಗ್ರಹ

ಉಡುಪಿ ತಾಲ್ಲೂಕಿನ ವಂಕಸಿಡಿಯೂರು ಬೈಲಕೆರೆಯಲ್ಲಿ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಸಭೆ ಮಾರ್ಚ್ 27ರಂದು ಕಾ॥ ದೋಗು ಸುವರ್ಣರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯನ್ನುದ್ದೇಶಿಸಿ ರೈತ ಸಂಘದ ಮುಖಂಡ ಕಾ॥ ಡೇವಿಡ್ ಎ. ಕರ್ಕಡರವರು ಮಾತನಾಡಿ ಸ್ವಾತಂತ್ರ್ಯ ನಂತರದ 40ವರ್ಷಗಳಲ್ಲಿ ಕೃಷಿ ಕೂಲಿಕಾರರ ಯಾವೊಂದು ಮೂಲಭೂತ ಸಮಸ್ಯೆಗಳು ಪರಿಹಾರ ಕಾಣದೇ ಸಂಕಷ್ಟದ ಬದುಕು ತಳ್ಳುತ್ತಿರುವ ಕೃಷಿ ಕೂಲಿಕಾರರು ಸಂಘಟಿತರಾಗಲು ಕರೆ ನೀಡಿದರು.

ಕೃಷಿಕೂಲಿಗಾರರಿಗೆ ಕನಿಷ್ಟವೇತನ ಜಾರಿಗಾಗಿ, ವೃದ್ಧಾಪ್ಯವೇತನ, ಮನೆ ನಿವೇಶದ ಹಕ್ಕಿಗಾಗಿ ಹೋರಾಟ ನಡೆಸಬೇಕೆಂದು ಹೇಳಿದರು,

ಕೃಷಿಕೂಲಿಕಾರರ ಸಂಘಟನೆಯನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಮುಂದಿನ ಚಟುವಟಿಕೆ ನಡೆಸಲು ಕಾ॥ ಸಂಕ್ರಿ ಪೂಜಾರಿ (ಕಾರ್ಯದರ್ಶಿ) ಅಪ್ಪು, ಕಲ್ಯಾಣಿ, ಸರಸು, ಬೂಡಿ, ಯಶೋಧ, ಸುಂದರಿ, ಜಲಜ, ಸುಂದರಿ ಪೂಜಾರಿಯವರನ್ನೊಳಗೊಂಡ 9ಜನರ ಸಮಿತಿ ರಚಿಸಿಲಾಯಿತು,

ಹಕ್ಕು ಪತ್ರ ನೀಡಲು ಒತ್ತಾಯ

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕರ್ನಾಟಕ ಪ್ರಾಂತ್ಯರೈತ ಸಂಘದ ಸಭೆ ಕಾ॥ ಎಲ್. ರಂಗೇಗೌಡರ ಅಧ್ಯಕ್ಷತೆಯಲ್ಲಿ ಸೇರಿ ಬಗರ್ ಹುಕುಂ ಸಾಗುವಳಿ ಮಾಡುವ ಹಾಗೂ ನಿವೇಶನ ರಹಿತರಿಗೆ ನಿವೇಶನದ ಹಕ್ಕು ಪತ್ರ ನೀಡಲು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಜನರಿಂದ ಅರ್ಜಿಗಳನ್ನು ಸಲ್ಲಿಸಲು ತೀರ್ಮಾನಿಸಲಾಯಿತು, ರೈತ ಮುಖಂಡರಾದ ಕಾ॥ ನರಸಿಂಹಯ್ಯ, ಶೇಖರಪ್ಪ, ಬಸವರಾಜುರವರುಗಳು ಮಾತನಾಡಿದರು,

ಬಂಡಿಗುಡ್ಡದಲ್ಲಿ ನಡೆದ ರೈತರ ಸಭೆಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಪತ್ರ ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡಲು ಸರ್ಕಾರವನ್ನು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಕೃಷಿಕೂಲಿಗಾರ ಆಂಜಿನಪ್ಪನ ಮೇಲೆ ಹಲ್ಲೆ

ಬಳ್ಳಾರಿ ಜಿಲ್ಲೆ ಶಿರಗುಪ್ಪ ತಾಲ್ಲೂಕಿನ ಹಾಗಲೂರು ಗ್ರಾಮದ ಹರಿಜನ ಆಂಜಿನಪ್ಪನನ್ನು ಸಮಾಧಿಯೊಂದನ್ನು ದಾಟಿರುವ ಆರೋಪ ಹೊರಿಸಿ ಆತನ ಮೇಲೆ ಹಲ್ಲೆ ಮಾಡಿರುವ ಘಟನೆಯೊಂದು ವರದಿಯಾಗಿದೆ. ತಾನು ಕೂಲಿ ಕೇಳಲು ಗಾದಿಲಿಂಗಪ್ಪನ ಮನೆಗೆ ತೆರಳುವಾಗ ಆಂಜಿನಪ್ಪ ಸಮಾಧಿ ದಾಟಿದನೆಂಬ ನೆಪ ಮಾಡಿ ಹಲ್ಲೆ ನಡೆಸಿರುವವರ ಮೇಲೆ ಕ್ರಮ ಜರುಗಿಸಲು ಪೊಲೀಸರಿಗೆ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಜರುಗಿಸದಿರುವುದನ್ನೂ ಶಿರಗುಪ್ಪ ತಾಲ್ಲೂಕು ಕೃಷಿ ಕೂಲಿಗಾರ ಸಂಘ ಖಂಡಿಸಿ ಕೂಲಿಗಾರರಿಗೆ ರಕ್ಷಣೆ ನೀಡಲು ಒತ್ತಾಯಿಸಿದೆ.

ವಿದ್ಯುತ್ ಕೊರತೆ ಬಗೆಹರಿಸಿ

ಕೋಲಾರ ಜಿಲ್ಲೆಯಲ್ಲಿ ರೈತರು ವಿದ್ಯುತ್ ಕೊರತೆಯಿಂದ ಕಂಗಾಲಾಗಿದ್ದು ರೈತರಿಗೆ ಪೂರ್ಣ ಕಾಲ ವಿದ್ಯುತ್ ದೊರಕಿಸಿ ಕಡಿತ ಸಮಯ ಬದಲಿಸಿ ವಿದ್ಯುತ್ ಓಲ್ಟೇಜ್ ಸಮಸ್ಯೆ ಬಗೆ ಹರಿಸಬೇಕೆಂಬ ಬೇಡಿಕೆ ಒತ್ತಾಯಿಸಲು ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿ ಚಿಂತಾಮಣಿಯಲ್ಲಿ ವಿಸ್ತೃತ ಸಭೆ ಸೇರಿ ನೀಡಿದ ಕರೆಯಂತೆ ಚಿಂತಾಮಣಿ, ಬಾಗೇಪಲ್ಲಿ, ಮುಳಬಾಗಿಲು, ಮತ್ತು ಶಿಡ್ಲಘಟ್ಟದಲ್ಲಿ ವಿದ್ಯುತ್ ಮಂಡಳಿ ಕಛೇರಿಗಳ ಮುಂದೆ ನೂರಾರು ರೈತ ಸಂಘದ ಕಾರ್ಯಕರ್ತರು ಧರಣಿ ಸತ್ಯಾಗ್ರಹ ನಡೆಸಿದರು.

ಬಗುರ್‌ಹುಕುಂ ಸಾಗುವಳಿದಾರರಿಗೆ ಸಚಿವರ ಆಶ್ವಾಸನೆ

ಕರ್ನಾಟಕ ಪ್ರಾಂತ ರೈತ ಸಂಘದ ಶಿವಮೊಗ್ಗ ಜಿಲ್ಲಾಸಮಿತಿ ಆಶ್ರಯದಲ್ಲಿ ಜಿಲ್ಲೆಯ 24 ಗ್ರಾಮಗಳಿಂದ ಬಂದ ನೂರಾರು ಕೃಷಿ ಕೂಲಿಗಾರ ರೈತರು ಕಾಲ್ನಡಿಗೆ ಜಾಥ ನಡೆಸಿ 73 ಮಹಿಳೆಯರು ಸೇರಿದಂತೆ 400ಕ್ಕೂ ಮೀರಿದ ರೈತರ ಬುಗುರ್ ಹುಕ್ಕುಂ ಸಾಗುವಳಿ ಅರ್ಜಿ ಹಾಗೂ ನಿವೇಶನ ರಹಿತರ ಅರ್ಜಿಗಳನ್ನು ಸಮಾಜ ಕಲ್ಯಾಣ ಸಚಿವ ಜಿ. ಬಸವಣ್ಣಪ್ಪ, ಕೈಗಾರಿಕಾ ಸಚಿವ ಜೆ.ಎಚ್. ಪಟೇಲ್‌ರವರಿಗೆ ಹಾಗೂ ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಲಾಯಿತು.

ವಿಧಾನ ಸಭೆಯ ಅಧಿವೇಶನದಲ್ಲಿ ಬುಗುರ್‌ಹುಕ್ಕುಂ ಸಾಗುವಳಿ ಮಂಜೂರಾತಿ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವುದಾಗಿ ಒಕ್ಕಲೆಬ್ಬಿಸುವ ಅರಣ್ಯಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಸಚಿವರುಗಳು ಆಶ್ವಾಸನೆ ನೀಡಿದರು. ಸರ್ಕಾರದ ಆದೇಶ ಬಂದ ಕೂಡಲೇ ಸಾಗುವಳಿ ಪತ್ರ ಕೊಡುವುದಾಗಿ ಜಿಲ್ಲಾಧಿಕಾರಿಗಳು ಹೇಳಿದರು. ರೈತರನ್ನುದ್ದೇಶಿಸಿ ಸಿ.ಪಿ.ಐ (ಎಂ) ಮುಖಂಡ ಕಾ॥ ಎಸ್.ಬಿ. ಶಿವಶಂಕರ್ ಡಿ.ವೈ.ಎಫ್.ಐ. ಸಂಚಾಲಕ ಎಲ್. ರಂಗೇಗೌಡ, ರೈತಸಂಘದ ಸಂಚಾಲಕ ನರಸಿಂಹಯ್ಯನವರುಗಳು ಮಾತನಾಡಿದರು.

ರೈತ ಸಂಘದ ಘಟಕ ರಚನೆ

ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೋಕು ಕಿರಿ ಅಂಬಲಗಾ ಗ್ರಾಮದಲ್ಲಿ ರೈತ ಸಂಘದ ಸಭೆ ಬಸವಣಪ್ಪಾ ಬುದ್ಧಿವಂತ ಅವರ ಅಧ್ಯಕ್ಷತೆಯಲ್ಲಿ ಸೇರಿತು; ರೈತ ಮುಖಂಡ ಮಾರುತಿ ಮಾನ್ಪಡೆ, ಬಾಬು ಮುಗಳಿ, ಮುಂತಾದವರು ಮಾತನಾಡಿ ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಯಿಂದ ರೈತರು ದಿವಾಳಿ ಏಳುತ್ತಿದ್ದು ರೈತ-ಕೃಷಿ ಕೂಲಿಕಾರರ ಬಲಿಷ್ಟ ಸಂಘಟನೆ ಕಟ್ಟಿ ಬೆಳೆಸಲು ಒಟ್ಟಾಗಿ ದುಡಿಯ ಬೇಕೆಂದು ಕರೆ ನೀಡಿದರು.

ಧರ್ಮರಾವ ಪಾಟೀಲ್ (ಅಧ್ಯಕ್ಷ) ಅಂಬವ್ವಾನಾಟಕರ್, ಪಂಡಿತರಾವ ಬೀರದಾರ (ಉಪಾಧ್ಯಕ್ಷರು) ಶಿವಶರಣಪ್ಪಾ ಬುದ್ಧಿವಂತ (ಪ್ರ. ಕಾರ್ಯದರ್ಶಿ) ಚಂದ್ರಕಾಂತ ಮಾಲಿ ಪಾಟೀಲ್ (ಸಂಘಟನಾ ಕಾರ್ಯದರ್ಶಿ) ಶಂಕರಪ್ಪಾ ಬಿರಾದಾರ (ಖಜಾಂಚಿ) ಲಾಲ್‌ಸಹೇಬ (ಸಹಖಜಾಂಚಿ) ಯವರನ್ನೊಳಗೊಂಡ 31 ಜನರ ಸಮಿತಿ ರಚಿಸಲಾಯಿತು,

ಬ್ಯಾಂಕ್ ಪಿಕೆಟಿಂಗ್

ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೋಕು ಸಮಿತಿ ನೇತೃತ್ವದಲ್ಲಿ ಹರಿಜನ-ಗಿರಿಜನರಿಗೆ ನಂಗಲಿ ವೈಸೂರು ಬ್ಯಾಂಕ್ ನಿಂದ ಸಬ್ಸಿಡಿ ಲೋನ್ ಮಂಜೂರು ಮಾಡುವಂತೆ ಬ್ಯಾಂಕ್ ಅಧಿಕಾರಿಗಳನ್ನು ಒತ್ತಾಯಿಸಿ ಪಿಕೆಟಿಂಗ್ ನಡೆಸಲಾಯಿತು. ಬ್ಯಾಂಕ್ ಅಧಿಕಾರಿ ಬಂದು ಸಾಲ ಮಂಜೂರು ಮಾಡುವ ಭರವಸೆ ನೀಡಿದ ನಂತರ ಪಿಕೆಟಿಂಗ್ ಹಿಂತೆಗೆದು ಕೊಳ್ಳಲಾಯಿತು. ಮುಳಬಾಗಲು ಶಾಸಕರಾದ ಕಾ॥ ಆರ್. ವೆಂಕಟರಾಮಯ್ಯ ಕಾ॥ ಗೋಪಾಲ್ ಸೂರ್ಯನಾರಾಯಣ ನೇತೃತ್ವ ವಹಿಸಿದ್ದರು,

ಹಾಡುತ್ತೇನೆ

ಸಂಗಾತಿಗಳೇ,
ಸಾಗುತ್ತಿದ್ದೇನೆ ನಾನು
ನನ್ನವರು ಬಿಟ್ಟುಹೋದ
ಫಲವಾಗದೇ ಇದ್ದ
ಎದೆಯ ಭಾವನಗಳ-
ಕನಸ ಕೋಟೆ ಬಗೆದು
ನನಸಿನಂಗಳದೆಡೆಗೆ;
ಸಾಗುತ್ತ-ಸಾಗುತ್ತ
ಹಾಡುತ್ತೇನೆ,
ಗಟ್ಟಿ ದನಿಯಲ್ಲಿ-
ಹಾಡದವರ, ಹಾಡಬೇಕೆಂದವರ
ಗಂಟಲೊಳಗೇ
ನುಂಗಿಕೊಂಡವರ ಹಾಡು.

ನೀಲಾ ಕೆ.

ಸಿ. ಐ. ಟಿ. ಯು. ಹೋರಾಟಗಳು

ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘ (ಸಿ.ಐ.ಟಿ.ಯು) ನೇತೃತ್ವದಲ್ಲಿ ಫೆಬ್ರವರಿ 8ರಂದು ಮಂಗಳೂರಿನ ಟಾಗೂರ್ ಪಾರ್ಕ್ ನಿಂದ ಬೃಹತ್ ಆಟೋರಿಕ್ಷಾಗಳ ಚಾಲಕರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಿದರು.

ಮೀಟರ್ ಪದ್ಧತಿ ಜಾರಿಗೆ ಬರಬೇಕು, ಮೀಟರ್ ದರವನ್ನು ಸಂಘದ ಪ್ರತಿನಿಧಿಗಳು ಹಾಗೂ ಆರ್.ಟಿ.ಓ. ಸೇರಿ ನಿರ್ಧರಿಸಬೇಕು, ರಿಕ್ಷಾ ಬಿಡಿ ಭಾಗಗಳನ್ನು ನ್ಯಾಯ ಬೆಲೆಯಲ್ಲಿ ನೀಡಬೇಕು. ವಿಪರೀತ ದಂಡ ವಿಧಿಸುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಪರ್ಮಿಟ್ ನವೀಕರಣದಲ್ಲಿರುವ ತೊಡಕನ್ನು ನಿವಾರಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಮನವಿಯನ್ನು ನಿಯೋಗ ಜಿಲ್ಲಾಧಿಕಾರಿಗಳಿಗೆ ನೀಡಿತು,

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಅಧ್ಯಕ್ಷರಾದ ಕಾ॥ ಕೆ. ಮೂಸಬ್ಬರವರು ಕಾರ್ಯದರ್ಶಿ ಕಾ॥ ಕಮಲಾಕ್ಷ ಎಂ, ಬಂಗೇರ, ಕಾ॥ ಕೆ. ಅಬೂಬಕರ್‌ರವರುಗಳು ಮಾತನಾಡಿ ಆಟೋರಿಕ್ಷಾ ಚಾಲಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಸಿದ್ದನ್ನು ಖಂಡಿಸಿದರು. ರಾಜ್ಯ ಸರ್ಕಾರಕ್ಕೆ ಹಲವಾರು ಬಾರಿ ಬೇಡಿಕೆಗಳ ಕುರಿತು ಮನವಿ ಸಲ್ಲಿಸಿದ್ದರೂ ಯಾವ ಕ್ರಮವನ್ನು ಕೈಗೊಳ್ಳದಿರುವುದನ್ನು ಖಂಡಿಸಿದರು. ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಬೇಕೆಂದು ಭಾಷಣಕಾರರು ಕರೆ ನೀಡಿದರು, ರಿಕ್ಷಾ ಚಾಲಕರ ಸಂಘದ ಕಾರ್ಯದರ್ಶಿ ಕಾ॥ ಜೆ. ಶೇಖರ್ ರವರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಬೀಡಿ ನಾಯಕರ ಮೇಲಿನ ಹಲ್ಲೆ ಖಂಡನೆ

ಧಾರವಾಡ ಜಿಲ್ಲೆಯ ಬೀಡಿ ಕಾರ್ಮಿಕರು ಎ.ಐ.ಟಿ.ಯು.ಸಿ. ಕಾರ್ಮಿಕ ಸಂಘವನ್ನು ತ್ಯಜಿಸಿ ಕಳೆದ ಎರಡು ವರ್ಷದಿಂದಲೂ ಸಿ.ಐ.ಟಿ.ಯು. ಸಂಘದ ನೇತೃತ್ವದಲ್ಲಿ ಹೋರಾಟ ನಡೆಸಿ ಹಲವಾರು ಸೌಲಭ್ಯಗಳನ್ನು ಪಡೆದಿದ್ದಾರೆ. ಈ ಬೆಳವಣಿಗೆಯಿಂದ ಗಾಬರಿಗೊಂಡಿರುವ ಪಿಸ್ತೂಲ್ ಬೀಡಿ 3ನೇ ಬ್ರಾಂಚ್ ಮಾಲೀಕವರ್ಗ ಸಿ.ಐ.ಟಿ.ಯು. ಸಂಘವನ್ನು ಹೇಗಾದರೂ ಮಾಡಿ ಮುರಿಯಬೇಕೆಂದು ಪ್ರಯತ್ನ ನಡೆಸಿದ್ದಾರೆ;

ಸಿ.ಐ.ಟಿ.ಯು. ನ ಮುಂದಾಳು ಕಾ॥ ಹೂರಾಂಭಿಯವರು ಬ್ರಾಂಚ್ ಆಫೀಸಿಗೆ ಹೋದಾಗ ಬಾಗಿಲು ಹಾಕಿ ಐವರು ಮಹಿಳೆಯರ ಸಹಾಯದಿಂದ ಚನ್ನಾಗಿ ಥಳಿಸಲಾಗಿದೆ. ಕತ್ತಿನಲ್ಲಿದ್ದ ಆಕೆಯ ಚಿನ್ನದ ಸರವನ್ನು ಅಪಹರಿಸಲಾಗಿದೆ,

ಮಾರ್ಚ್ 3 ರಂದು ಸೇರಿದ ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಷನ್ ರಾಜ್ಯ ಸಮಿತಿ ಸಭೆಯು ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿ ಹಲ್ಲೆ ನಡೆಸಿದವರ ಮೇಲೆ ಕ್ರಮ ಜರುಗಿಸಲು ಒತ್ತಾಯಿಸಲಾಗಿದೆ.

ಜನರಲ್ ವರ್ಕರ್ಸ್ ಯೂನಿಯನ್ ಮಹಾ ಸಭೆ

ಉಡುಪಿ ತಾಲ್ಲೋಕು ಜನರಲ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿಯು.) 16ನೇ ವಾರ್ಷಿಕ ಮಹಾ ಸಭೆ ಮಾರ್ಚ್ 20 ರಂದು ಕಾ॥ ಡಿ. ವಿಶ್ವನಾಥರೈರವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಜರುಗಿತು,

ಅಗಲಿದ ಸಂಗಾತಿಗಳಿಗೆ ಪ್ರಾರಂಭದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾರ್ಯದರ್ಶಿ ಕಾ॥ಡೇವಿಡ್ ಎ. ಕರ್ಕಡ

(8ನೇ ಪುಟ ನೋಡಿ)

ಜಗತ್ತನ್ನು ಬದಲಿಸಿದ ಆ ಕಿರು ಹೊತ್ತಿಗೆ !

ವಿಶ್ವಾದ್ಯಂತ ಕಾರ್ಮಿಕ ವರ್ಗ ಹಾಗೂ ಅದರ ಹಿತೈಷಿಗಳು ಮೇ ದಿನಾಚರಣೆ ನಡೆಸುತ್ತಿರುವ ಸಂದರ್ಭದಲ್ಲಿ "ವಿಶ್ವಕಾರ್ಮಿಕರೇ ಒಂದಾಗಿ" ಎಂದು ಮೊತ್ತಮೊದಲು ಕರೆ ನೀಡಿದ ಚಾರಿತ್ರಿಕ ಅಮರ ಕೃತಿ "ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'' ಕುರಿತಾದ ಒಂದು ಕಿರು ಲೇಖನ ಇದು.

1848, ಫೆಬ್ರವರಿ 24, ಲಂಡನ್ನಿನ 46, ಲಿವರ್‌ಪೂಲ್ ಬೀದಿಯ ಭಿಷಪ್‌ಗೇಟ್ ಮುದ್ರಣಾಲಯದಿಂದ ಹೆಸರು ಪ್ರಕಟಿಸದ ಇಬ್ಬರು ಲೇಖಕರು ಬರೆದ 23 ಪುಟಗಳ ಕಿರು ಹೊತ್ತಿಗೆಯ 200 ಪ್ರತಿಗಳು ಹೊರಬಂದವು. ಪ್ರಥಮ ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಸಂಘಟನೆಯಾದ ಕಮ್ಯುನಿಸ್ಟ್ ಲೀಗಿಗೆ ಕಾರ್ಲ್‌ಮಾರ್ಕ್ಸ್ ಮತ್ತು ಫೆಡರಿಕ್ ಏಂಗಲ್ಸ್‌ರವರು ಬರೆದ ಕಾರ್ಯಪುಸ್ತಕವೇ ಅದು. ಈ "ಕಮ್ಯೂನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿ" ಲೇಖಕರು ಲೀಗಿನ ಉದ್ದೇಶ ಮತ್ತು ಗುರಿಯನ್ನು ಹಾಗೂ ಕಾರ್ಮಿಕ ವರ್ಗದ ಸಿದ್ಧಾಂತವಾದ ವೈಜ್ಞಾನಿಕ ಸಮಾಜವಾದದ ಮುಖ್ಯಾಂಶಗಳನ್ನು ಪ್ರತಿಪಾದಿಸಿದ್ದರು.

ನಂತರದ ಕಾಲಘಟ್ಟದಲ್ಲಿ ಜಗತ್ತಿನಾದ್ಯಂತ ಎಲ್ಲಾ ಭಾಷೆಗಳಲ್ಲಿ ಸಾವಿರಾರು ಆವೃತ್ತಿಗಳಲ್ಲಿ ಇದರ ಪ್ರತಿಗಳು ಹೊರಬಂದಿವೆ.

ಯಾತಕ್ಕಾಗಿ ಇಷ್ಟೊಂದು ಸಂಖ್ಯೆಯಲ್ಲಿ ಓದುಗರನ್ನು ಇದು ಆಕರ್ಷಿಸಿತು ಮತ್ತು ಈಗಲೂ ಯಾಕೆ ಆಕರ್ಷಿಸುತ್ತಿದೆ? ಇದರಲ್ಲಿ ಕ್ರೋಢೀಕರಿಸಲ್ಪಟ್ಟಿರುವ ಚಿಂತನೆಯ ಶ್ರೀಮಂತಿಕೆ ಮತ್ತು ಆಳ ಮಾರ್ಕ್ಸ್ ಮತ್ತು ಏಂಗಲ್ಸ್‌ರವರ ದೀರ್ಘವಾದ, ವಿಸ್ತಾರವಾದ ಅಧ್ಯಯನದ ಫಲವಾಗಿದೆ. ಇದರ ಪಾಠವು ಸ್ಪಷ್ಟ ಹಾಗೂ ಸಂಕ್ಷಿಪ್ತವಾಗಿದ್ದು ಬಳಸಲಾದ ಭಾಷೆಯು ಅಗತ್ಯದ ಅಂಶಗಳನ್ನಷ್ಟೇ ಹೇಳುವ ಅಲಂಕಾರಿಕವಾಗಿವೆ. ಜಗತ್ತಿನ ಸರ್ವಶ್ರೇಷ್ಠ ಪತ್ರಿಕಾ ಬರಹಗಳಿಗೆ ಸವಾಲೆಸೆಯುವ ಮಾದರಿಯದ್ದಾಗಿದೆ.

ಈ ಪ್ರಥಮ ಮುದ್ರಣವಾಗುವ ವೇಳೆಗೆ ಮಾರ್ಕ್ಸ್‌ಗೆ 30 ವರ್ಷ ಹಾಗು ಏಂಗಲ್ಸ್‌ಗೆ 28 ವರ್ಷ ವಯಸ್ಸಾಗಿತ್ತು. ಭಾವನೆಯ ಪ್ರೌಢಿಮೆ ಹಾಗು ಪ್ರಶ್ನಿಸುವ ಧೀಮಂತಿಕೆಗೆ ಇದ್ದ ವಯಸ್ಸದು.

ಹೊಸ ಜಾಗತಿಕ ಕಣ್ಣೋಟ

ಈ ಪ್ರಣಾಳಿಕೆ ಎಂದರೆ—ಸಮಾಜವಾದವನ್ನು ಕಲ್ಪನಾ ವಾದದಿಂದ ಒಂದು ವಿಜ್ಞಾನವನ್ನಾಗಿ ಮಾಡುವಲ್ಲಿ ನಿರ್ಧಾರಾತ್ಮಕವಾಗಿ ಆದ ಮುಂದುವರಿಕೆಯಾಗಿದೆ. ಇದರಲ್ಲಿ ಕಂಡು ಬರುವ ಕಾರ್ಮಿಕ ವರ್ಗದ ಕ್ರಾಂತಿಕಾರಕ ಸಿದ್ಧಾಂತವು ಸರ್ವೇ ಸಾಮಾನ್ಯ ನಿಯಮಗಳಾಗಿದ್ದು ಜಾಗತಿಕ ಕ್ರಾಂತಿಕಾರಕ ಮನೋಭಾವ ಅವಿಭಾಜ್ಯ ಅಂಗವಾಗಿದೆ, ಎಲ್ಲವನ್ನು ಒಳಗೊಂಡ ವಿಶ್ವಕೋಶದಂತೆ ಪ್ರಣಾಳಿಕೆಯು ತಿರುಳಿದೆ, ಕಲ್ಪನೆ, ಭ್ರಮೆ, ನಿರೀಕ್ಷೆಗಳಾಗಿದ್ದವು ಒಂದು ವೈಜ್ಞಾನಿಕ ಸಿದ್ಧಾಂತಕ್ಕೆ ದಾರಿ ಮಾಡಿ ಕೊಟ್ಟಿತು. ಹಾಗೂ ಅದು ಪ್ರತಿಯೊರ್ವ ಶ್ರಮಜೀವಿಗೂ ಮಾನವೀಯವಾದ ವಾತಾವರಣ, ಜೀವನ ಹಾಗೂ ಆತನ ಉನ್ನತಿಗೆ ಪೂರಕವಾಗಿ ದುಡಿಯುವ ಪರಿಸರವನ್ನು ತೋರಿಸುತ್ತಾ, ಜಗತ್ತನ್ನು ವ್ಯಾಖ್ಯಾನಿಸಿತು ಮಾತ್ರವಲ್ಲ ಅದನ್ನು ಬದಲಿಸುವುದೆಂತು ಎಂದು ಮಾರ್ಗ ಸೂಚಿಸಿತು. ಚರಿತ್ರೆಯನ್ನು ಭೌತವಾದಿ ದೃಷ್ಟಿಕೋನದಿಂದ ನೋಡಲು ಪ್ರಣಾಳಿಕೆಯು ಒಂದು ಹೊಸ ವೈಜ್ಞಾನಿಕವಾದ ಜಾಗತಿಕ ಕಣ್ಣೋಟವನ್ನು ನೀಡಿತು. ಸಮಾಜ ಜೀವನವನ್ನು ವಿಮರ್ಶಿಸುತ್ತಾ ದ್ವಂದ್ವಮಾನವ ಬೆಳವಣಿಗೆಯ ಹಾಗೂ ವರ್ಗ ಹೋರಾಟದ ಅತ್ಯಂತ ವ್ಯಾಪಕವಾದ, ಗಾಢವಾದ ಸಿದ್ಧಾಂತವಾಗಿ—ಹೊಸ ಸಮಾಜದ ರುವಾರಿಗಳಾಗಿ ಶ್ರಮಜೀವಿ ವರ್ಗವು ಜಾಗತಿಕ ಕ್ರಾಂತಿಕಾರಿ ಶಕ್ತಿಯಾಗಿ ವಹಿಸಬೇಕಾದ ಚಾರಿತ್ರಿಕ ಪಾತ್ರವನ್ನು ವಿವರಿಸಿತು.

ಬಂಡವಾಳಶಾಹಿ ಪದ್ಧತಿಯಲ್ಲಿ ವರ್ಗ ಹೋರಾಟದ ಬೆಳವಣಿಗೆ, ಶೋಷಣಾಮಯ ವ್ಯವಸ್ಥೆಯ ಕಿತ್ತೊಗೆಯುವಿಕೆ ಹಾಗೂ ತನ್ಮೂಲಕ ಹೊಸ ಸಮಾಜದ ನಿರ್ಮಾಣದ ಬಗ್ಗೆ ಮಾರ್ಕ್ಸ್ ಮತ್ತು ಏಂಗಲ್ಸ್‌ರವರು ನಿಜಕ್ಕೂ ವೈಜ್ಞಾನಿಕವಾದ ಸಾಮಾಜಿಕ ಭವಿಷ್ಯತ್ತನ್ನು ನುಡಿದಿದ್ದರು.

ಬೂರ್ಜ್ವಾವರ್ಗದ ಉನ್ನತಿ ಹಾಗೂ ಅವನತಿ:

ಖಾಸಗಿ ಆಸ್ತಿ ಸಂಬಂಧ ಹೊಂದಿರುವ ಸಮಾಜ ವ್ಯವಸ್ಥೆಯ ಚರಿತ್ರೆ ಎಲ್ಲವೂ ವರ್ಗ ಹೋರಾಟದ ಚರಿತ್ರೆಯಾಗಿದೆ ಎಂದು ಮಾರ್ಕ್ಸ್ ಎಂಗೆಲ್ಸ್ ತೋರಿಸಿಕೊಟ್ಟರು. ಬೂರ್ಜ್ವಾ ಸಮಾಜವು ವರ್ಗಗಳನ್ನಾಗಲಿ ಇಲ್ಲವೇ ವರ್ಗ ವೈಷಮ್ಯಗಳನ್ನಾಗಲಿ ಬಿಟ್ಟಿರಲು ಸಾಧ್ಯವಿಲ್ಲ. ಕಾರ್ಮಿಕ ವರ್ಗದ ಮೇಲಿನ ಶೋಷಣೆ, ಹತ್ತಿಕ್ಕುವಿಕೆ—ಜಿದ್ದಾಜಿದ್ದಿನ ಸ್ಪರ್ಧೆ, ಕೆಲವೇ ಕೆಲವು ವ್ಯಕ್ತಿಗಳ ಕೈಗಳಲ್ಲಿ ಬಂಡವಾಳದ ಕೇಂದ್ರೀಕರಣ, ಸಣ್ಣಪುಟ್ಟ ಬೂರ್ಜ್ವಾ ವರ್ಗಗಳ ಮತ್ತು ಇತರೆ ಸಮಾಜ ವಿಭಾಗಗಳ ಜನರ ಅವನತಿ ಇವೆಲ್ಲವೂ ಬಂಡವಾಳಶಾಹಿ ಬೆಳವಣಿಗೆಯ ಪ್ರತಿಫಲನವಾಗಿದೆ. ಬೂರ್ಜ್ವಾ ವರ್ಗದ ರಾಜಕೀಯ ಅಧಿಕಾರವು ಶೋಷಿತ ವರ್ಗವನ್ನು ಸಂಘಟಿತ ಹಿಂಸಾತ್ಮಕ ಕ್ರಮಗಳ ಮೂಲಕ ದಮನಿಸುವುದರ ಮೇಲೆ ನೆಲೆ ನಿಂತಿದೆ. ಬೂರ್ಜ್ವಾ ಸಮಾಜವು ಬಂಡವಾಳಕ್ಕಾಗಿ ಮಾನವನ ಘನತೆಯನ್ನು ತುಚ್ಛೀಕರಿಸುತ್ತಾ–ಇವರ ನಡುವೆ ನಿರ್ದಯವಾದ "ಹಣ"ದ ಸಂಬಂಧವನ್ನು ಬೆಳೆಸುತ್ತಾ, ತೀರಾ ಸ್ವಾರ್ಥಪೂರಿತ ಹಿತಾಸಕ್ತಿಗಳನ್ನು ಹೊರತುಪಡಿಸಿ ಇನ್ನಾವುದೇ ಸಂಬಂಧ ಮಾನವ-ಮಾನವನ ನಡುವೆ ಇರದಂತಹ ವಾತಾವರಣವನ್ನು ನಿರ್ಮಿಸುತ್ತದೆ. ಬೂರ್ಜ್ವಾ ವರ್ಗವು ಎಳ್ಳಷ್ಟೂ ನಾಚಿಕೆ ಇಲ್ಲದ ನಗ್ನಕ್ರೂರ ಶೋಷಣಾಕ್ರಮಗಳನ್ನು ಅನುಸರಿಸುತ್ತದೆ.

ಕಾರ್ಮಿಕ ವರ್ಗದ ಮೇಲೆ ನಡೆದ ಕೊನೆ ಇಲ್ಲದ ಶೋಷಣೆ ಹಾಗೂ ಅವರ ಶ್ರಮದ ಲೂಟಿಯ ಫಲವಾಗಿ ತುಲನಾತ್ಮಕವಾಗಿ ಸಣ್ಣ ಕಾಲಾವಧಿಯಲ್ಲೇ ಬೂರ್ಜ್ವಾ ಸಮಾಜದಲ್ಲಿ ಪ್ರಬಲವಾದ ಉತ್ಪಾದನಾ ಶಕ್ತಿಯು ರೂಪುಗೊಂಡಿತು. ಉನ್ನತ ಮಟ್ಟದ ತಾಂತ್ರಿಕ ನೈಪುಣ್ಯತೆ ಹಾಗು ಯಂತ್ರಗಾರಗಳ ದೊಡ್ಡ ರೀತಿಯ ಉತ್ಪಾದನೆ ಹೊರ ಹೊಮ್ಮಿತು, ಜಾಗತಿಕ ಮಾರುಕಟ್ಟೆ ನಿರ್ಮಾಣವಾಯಿತು. ಬೂರ್ಜ್ವಾ ವರ್ಗವು ಆರ್ಥಿಕವಾಗಿ ಅತ್ಯಂತ ಪ್ರಬಲ ವರ್ಗವಾಯಿತು. ರಾಜಕೀಯ ಮೇಲಾಳ್ತನವನ್ನು ಪಡೆದ ಈ ವರ್ಗ ತನ್ನೆಲ್ಲ ಅಧಿಕಾರವನ್ನು ತನ್ನ ಹಿತಾಸಕ್ತಿ ಕಾಪಾಡಲು ಹಾಗೂ ಕಾರ್ಮಿಕವರ್ಗವನ್ನು ದಯನೀಯವಾಗಿ ದಮನಿಸಲು ಬಳಸಿತು.

ಆದರೆ, ಈಗ ಮಾಟದ ಫಲವಾಗಿ ಹೊರಬಂದ ಶಕ್ತಿಯನ್ನು ನಿಯಂತ್ರಿಸಲು ಸಾಧ್ಯವಾಗದ ಮಾಂತ್ರಿಕನ ಸ್ಥಿತಿಗೆ ಭೂರ್ಜ್ವಾ ವರ್ಗ ತಲುಪಿದೆ. ಭೂರ್ಜ್ವಾ ಉತ್ಪಾದನಾ ಸಂಬಂಧದ ಫಲವಾಗಿ ಉತ್ಪಾದನೆಯಲ್ಲಿನ ಬೆಳವಣಿಗೆಯು ದೊಡ್ಡ ರೀತಿಯಲ್ಲಿ ಕುಂಟಿತವಾಗುತ್ತಿದೆ. ಪರಿಣಾಮವಾಗಿ ತೀವ್ರವಾದ ಆರ್ಥಿಕ ಬಿಕ್ಕಟ್ಟು ಬೆಳೆದು ಬರುತ್ತಿದೆ.

ಕಾರ್ಮಿಕ ವರ್ಗದ ಚಾರಿತ್ರಿಕ ರಾಯಭಾರಿತ್ವ :

ನಿರಂತರತೆಯ ಏಕೈಕ ಕ್ರಾಂತಿಕಾರಿ ವರ್ಗವಾದ ಕಾರ್ಮಿಕವರ್ಗ ಮಾತ್ರ ಎಲ್ಲಾ ಶ್ರಮಜೀವಿ ವರ್ಗದ ಹಿತ ಕಾಯ ಬಲ್ಲುದು. ತಾನು ಬಂಧಿತವಾಗಿರುವ ಸರಪಳಿ ಹೊರತು ಪಡಿಸಿ ಇನ್ನೇನನ್ನು ಇದು ಕಳೆದು ಕೊಳ್ಳಬೇಕಾಗಿಲ್ಲ. ಈ ವರ್ಗದ ಕ್ರಾಂತಿ ಯಶಸ್ವಿಯಾಗಬೇಕಾದರೆ ಇದು ಇತರೆ ಪೀಡಿತ ವರ್ಗ ಹಾಗು ಬೂರ್ಜ್ವಾ ವರ್ಗದಿಂದ ವಿಮೋಚನೆಗೊಳಬೇಕಾದ ಇತರೇ ಸಾಮಾಜಿಕ ವರ್ಗಗಳ ಸಖ್ಯತೆಯನ್ನು ಹೊಂದಬೇಕು. ತಾನು ವಿಮೋಚನೆ ಯಾಗುವುದರೊಂದಿಗೆ ಇಡೀ ಸಮಾಜವನ್ನೇ ಕಾರ್ಮಿಕ ವರ್ಗ ವಿಮೋಚನೆಗೊಳಿಸಬಲ್ಲುದು.

ಆಯಾ ರಾಷ್ಟ್ರಗಳ ಪರಿಸ್ಥಿತಿಗನುಸರಿಸಿ ವಿವಿಧ ರೀತಿಯಲ್ಲಿ ಇದು ಕಾರ್ಯಗತವಾಗುವುದು. ಹೆಚ್ಚು ಬೆಳವಣಿಗೆ ಹೊಂದಿದ ರಾಷ್ಟ್ರಗಳಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು; ಸಾರಿಗೆ ಮತ್ತು ಸಾಲವನ್ನು ರಾಜ್ಯದ ಕೈಯಲ್ಲಿ ಕೇಂದ್ರಿಕರಿಸುವುದು ಎಲ್ಲಾ ಬಂಡುಕೋರರ ಮತ್ತು ವಲಸಿಗರ ಆಸ್ತಿಗಳನ್ನು ಮುಟ್ಟುಗೋಲು ಮಾಡಿ ಕೊಳ್ಳುವುದು, ರಾಜ್ಯ ನಿಯಂತ್ರಿತ ಕಾರ್ಖಾನೆಗಳ ವಿಸ್ತರಣೆ, ಭೂಸಂಬಂಧಿ ಆಸ್ತಿಗಳನ್ನು ರಾಜ್ಯ ವಶಪಡಿಸಿಕೊಳ್ಳುವುದು, ಕೃಷಿ ಮತ್ತು ಕೈಗಾರಿಕೆಗಳ ನಡುವೆ ತಾದಮ್ಯ ಸಂಬಂಧ ರೂಪಿಸುವುದು, ಗ್ರಾಮ ಮತ್ತು ನಗರ ಪ್ರದೇಶಗಳ ನಡುವಿನ ಅಂತರವನ್ನು ನಿಧಾನವಾಗಿ ಕಡಿಮೆಗೊಳಿಸಲು ಪೂರಕವಾಗಿ ನೆರವು ನೀಡುವುದು. ಶ್ರಮ ಪ್ರತಿಯೋರ್ವರಿಗೂ ಕಡ್ಡಾಯ ಎನ್ನುವ ಕರಾರು ಮಾಡುವುದು ಇವೇ ಮೊದಲಾದವುಗಳು.

ಕಾರ್ಮಿಕ ವರ್ಗದ ರಾಜಕೀಯ ಸಂಘಟನೆ–ಅಂದರೆ, ಅದರ ಕ್ರಾಂತಿಕಾರಕ ಪಕ್ಷದ ಅಗತ್ಯತೆಯನ್ನು ಪ್ರಣಾಳಿಕೆಯಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಮಂಡಿಸಿದ್ದಾರೆ. ಕಾರ್ಮಿಕ ವರ್ಗದ ಚಳುವಳಿಯ ಸ್ಥಿತಿಗತಿ, ಮುನ್ನಡೆಯ ಮಾರ್ಗ ಹಾಗು ಅಂತಿಮವಾಗಿ ಕಾರ್ಮಿಕವರ್ಗದ ಆಂದೋಲನದ ಗುರಿಯ ಬಗ್ಗೆ ಸ್ಪಷ್ಟ ತಿಳುವಳಿಕೆ ಹೊಂದಿರುವ ಕಾರ್ಮಿಕರ ಹೆಚ್ಚಿನ ಸದಸ್ಯತ್ವವನ್ನು ಈ ಪಕ್ಷ ಹೊಂದಿರುತ್ತದೆ. ಬಂಡವಾಳಶಾಹಿ ಪದ್ಧತಿಯ ವಿರುದ್ಧ ಬೆಳೆದುಬರುವ ಎಲ್ಲಾಕ್ರಾಂತಿಕಾರಿ ಆಂದೋಲನಗಳನ್ನು ಕಮ್ಯುನಿಸ್ಟರು ಬೆಂಬಲಿಸುತ್ತಾರೆ. ಈ ಉದ್ದೇಶಕ್ಕಾಗಿ ಪ್ರಜಾಪ್ರಭುತ್ವವಾದಿ ಪಕ್ಷಗಳ ನಡುವೆ ಒಪ್ಪಂದ ಹಾಗು ಐಕ್ಯತೆ ರೂಪಿಸಲು ಶ್ರಮಿಸುತ್ತದೆ.

ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷದ ಉದ್ದೇಶವಾದರು ಏನು ? ಕಾರ್ಮಿಕ ವರ್ಗವು ಭೂರ್ಜ್ವಾವರ್ಗವನ್ನು ಅಧಿಕಾರದಿಂದ ಕಿತ್ತೊಗೆದು ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಂಡು ಉತ್ಪಾದನಾ ಸಾಧನಗಳ ಖಾಸಗಿ ಮಾಲಿಕತ್ವವನ್ನು ಕೊನೆಗೊಳಿಸುತ್ತದೆ.

ಕಾರ್ಮಿಕ ವರ್ಗದ ರಾಜಕೀಯ ಅಧಿಕಾರ ಎನ್ನುವ ಸಿದ್ಧಾಂತವನ್ನು ನಂತರದಲ್ಲಿ ಇನ್ನಷ್ಟು ಸ್ಪಷ್ಟೀಕರಿಸಲಾಯಿತು. ಭೂರ್ಜ್ವಾ ವರ್ಗದಿಂದ ಎಲ್ಲಾ ಬಂಡವಾಳವನ್ನು ವಶಪಡಿಸಿಕೊಳ್ಳಲು, ಉತ್ಪಾದನೆಯ ಎಲ್ಲಾ ಸಲಕರಣೆಗಳ ಮಾಲಕತ್ವವನ್ನು ರಾಜ್ಯದ ಕೈಯಲ್ಲಿ ಕೇಂದ್ರೀಕರಿಸಲು ಹಾಗು ತ್ವರಿತವಾಗಿ ಉತ್ಪಾದನಾ ಬಲವನ್ನು ವೃದ್ಧಿಸಲು ಪೂರಕ ಕ್ರಮ ಕೈಗೊಳ್ಳಲು ಕಾರ್ಮಿಕ ವರ್ಗ ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಳ್ಳಬೇಕು.

ಕಾರ್ಮಿಕ ವರ್ಗವು ಮಾನವನ ಕನಸ್ಸನ್ನು ನನಸ್ಸಾಗಿಸಲ್ಲಿದೆ. ಮಾನವ ಶ್ರಮವನ್ನು ಬಂಧಮುಕ್ತಗೊಳಿಸಿ, ಆತನ ಪ್ರೌಢಿಮೆಯನ್ನು ಪದಗೊಳಿಸಿ, ಬೆಳವಣಿಗೆಗೊಳಿಸಿ ಅದರ ಪೂರ್ತ ಫಲವನ್ನು ಪಡೆಯಲು ಹಾಗು ಆತನ ಎಣೆ ಇಲ್ಲದ ಕ್ರಿಯಾಶೀಲತೆಯನ್ನು ಬೆಳಗಿಸಲು ಅವಕಾಶ ಮಾಡಿಕೊಡುತ್ತದೆ.

ಭವಿಷ್ಯತ್ತಿನಲ್ಲಿ ಸಮಾಜ ಹೇಗೆ ಬೆಳವಣಿಗೆ ಹೊಂದಲಿದೆ ? ಬಂಡವಾಳಶಾಹಿ ಪದ್ಧತಿಯು ಕೊನೆಗೊಳ್ಳುವ ಮೂಲಕ ಮಾನವನಿಂದ ಮಾನವನ ಶೋಷಣೆ ರಾಷ್ಟ್ರೀಯ ಮರ್ಧನಗಳು ಅಂತ್ಯವಾಗಲಿದೆ. ಅಂತಿಮವಾಗಿ ಮರ್ಧನಕ್ಕೊಳಪಟ್ಟ ರಾಷ್ಟ್ರಗಳೇ ಇರಲಾರವು ಎಂದು ಪ್ರಣಾಳಿಕೆ ಹೇಳುತ್ತದೆ. ಕಾರ್ಮಿಕ ವರ್ಗದ ವಿಜಯದೊಂದಿಗೆ–ಮೇಲ್ವರ್ಗದ ಅವಕಾಶವಾದಿ ಜನರಿಗೆ ಮಾತ್ರವಿದ್ದ ಶಿಕ್ಷಣ ಸೌಲಭ್ಯ ಕೊನೆಗೊಂಡು ಸಾಮಾಜಿಕ ಉತ್ಪಾದನೆಯಲ್ಲಿ ತೊಡಗಲು ಪೂರಕವಾದ ಶಿಕ್ಷಣವನ್ನು ಮಕ್ಕಳಿಗೆ ನೀಡಲಾಗುವುದು. ಸಮಾಜವಾದಿ ಕಣ್ಣೋಟ ನಿರ್ಣಯಾ

(6ನೇ ಪುಟ ನೋಡಿ)

ದೃಢ ನಿರ್ಧಾರದ ದಿನವಾಗಬೇಕು

ವರ್ಷವಿಡೀ ಕಾರ್ಮಿಕರು, ಒಂದೆಡೆ ಒಮ್ಮೆ, ಇನ್ನೊಂದೆಡೆ ಇನ್ನೊಮ್ಮೆ ವಿಧ-ವಿಧವಾದ ಭಾಗಶಃ ಬೇಡಿಕೆಗಳನ್ನೂ ತಮ್ಮ ಮಾಲಿಕರ ಮುಂದಿಟ್ಟು ಅದಕ್ಕಾಗಿ ಹೋರಾಡುತ್ತಾರೆ. ಕಾರ್ಮಿಕರಿಗೆ ಈ ಹೋರಾಟಗಳಲ್ಲಿ ನೆರವು ನೀಡುವಾಗ ಸಮಾಜವಾದಿಗಳು ಸಹಾ ಈ ಹೋರಾಟಗಳಿಗೂ ಇರುವ ಸಂಬಂಧವನ್ನು ವಿವರಿಸಬೇಕು. ಮತ್ತು ಮೇ ದಿನ ತಾವು ಈ ಸಂಬಂಧವನ್ನು ಅರಿತುಕೊಂಡಿದ್ದೇವೆ ಎಂದು ಕಾರ್ಮಿಕರು ಘೋಷಿಸುವ ಹಾಗೂ ದೃಢ ನಿರ್ಧಾರದಿಂದ ಈ ಹೋರಾಟಗಳಲ್ಲಿ ಸೇರಿಕೊಳ್ಳುತ್ತೇವೆ ಎಂದು ಸಾರುವ ದಿನವಾಗಬೇಕು.

— ಲೆನಿನ್

ಮತಾಂಧರಿಗೆ ಮತ್ತೊಮ್ಮೆ ಕಾಂಗ್ರೆಸ್ (ಐ) ಶರಣು

ರಾಜೀವ್ ಸರ್ಕಾರಕ್ಕೆ ಸಮಾನತೆಯ ಭಾವನೆಯೇ ಇಲ್ಲವೆನ್ನುತ್ತೀರಾ? ನಿಮ್ಮ ದೂಷಣೆ ಖಂಡಿತಾ ತಪ್ಪು. ನೋಡಿ! ಎಲ್ಲಾ ಧರ್ಮಾಂಧ, ಮತೀಯ ಶಕ್ತಿಗಳ ಸಮ್ಮುಖ ಯಾವ ಭೇದ-ಭಾವವೂ ಇಲ್ಲದೆ, ಸಮಾನ ಭಾವದಿಂದ ಅನು ಶರಣಾಗಬಲ್ಲ:ದು-ತನ್ನ ಸಿಂಹಾಸನ ಉಳಿಸಿಕೊಳ್ಳಲು! ಶಾಬಾನು ಕೇಸಿನಲ್ಲಿ ವಂಚನೆ, ರಾಮಜನ್ಮಭೂಮಿ—ಬಾಬ್ರಿ ಮಸೀದಿ ವ್ಯವಹಾರ, ರಾಜಸ್ಥಾನದ ಸತಿ ಘಟನೆ, ಪಕ್ಕಾ ಖಾಲಿಸ್ತಾನೀ ಮುಖಂಡರ ಬಿಡುಗಡೆ ಮತ್ತು ಇತ್ತೀಚೆಗೆ ಸತಿಯ ಹೆಸರಿನಲ್ಲಿ ಹೆಂಗಸರನ್ನು ಸುಡಬೇಕೆಂದು ಬೋಧಿಸುತ್ತಾ ತಿರುಗಲು ಶಂಕರಾಚಾರ್ಯರಿಗೆ ಪೂರ್ಣ ಸ್ವಾತಂತ್ರ್ಯ! ರಾಜೀವ್ ಸರ್ಕಾರ ವಿವಿಧ ಮತಗಳ ನಡುವೆ ಪಕ್ಷಪಾತ ಮಾಡುತ್ತದೆ ಅಥವಾ ಅವುಗಳೆದುರು ಮಂಡಿಯೂರಲು ಹಿಂಜರಿಯುತ್ತದೆ ಎಂದು ಯಾರು ತಾನೇ ಹೇಳಬಲ್ಲರು?

ಕೋಮುವಾದಿಗಳು ಮತ್ತು ಮತೀಯ ಪ್ರತಿಗಾಮಿಗಳೆದುರು ತಲೆ ಬಾಗುತ್ತಾ ಬಂದಿರುವ ರಾಜೀವ ಸರ್ಕಾರದ್ದು ಅಮೋಘ ದಾಖಲೆ! ಹಿಂದಿನ ಎಲ್ಲಾ ಕಾಂಗ್ರೆಸ್ (ಐ) ಸರ್ಕಾರಗಳನ್ನೂ ಅದು ಮೀರಿ ನಿಂತಿದೆ. ಹೀಗಿರುವಾಗ ಮತಾಂಧ ಶಕ್ತಿಗಳ ವಿರುದ್ಧ ಹೋರಾಡುತ್ತಿರುವವರ ಸ್ವಾತಂತ್ರ್ಯದ ಮೇಲೆ ಮಿತಿ ಹಾಕುವುದು, ಅವರನ್ನು ಬಂಧಿಸುವುದು ಸಹಜವೇ. ಸ್ವಾಮಿ ಅಗ್ನಿವೇಶರ ಜತೆಗಾಗಿರುವುದು ಇದೇ ವರ್ತನೆ. ಸತಿಯ ಬಗ್ಗೆ ಧರ್ಮಶಾಸ್ತ್ರಗಳ ಆಧಾರದ ಮೇಲೆ ಚರ್ಚೆ ನಡೆಸಬೇಕೆಂದು ಅಗ್ನಿವೇಶ ಪೂಜ್ಯ (!) ಶಂಕರಾಚಾರ್ಯರಿಗೆ ಸವಾಲು ಹಾಕಿದರು. ಮೊದಲಿಗೆ ಶಂಕರಾಚಾರ್ಯ ಸವಾಲನ್ನೇನೋ ಸ್ವೀಕರಿಸಿದರು. ಆದರೆ ಕೊನೆಯ ಗಳಿಗೆಯಲ್ಲಿ ಅದೇಕೋ ಅವರಿಗೆ ದಿಗಿಲು ಹುಟ್ಟಿತು, ಧಾರ್ಮಿಕ ಚರ್ಚೆಯಿಂದ ಪೊಲೀಸ್ ರಕ್ಷಣೆ ಯಾಚಿಸಿದರು! ಉತ್ತರ ಪ್ರದೇಶದ ಕಾಂಗ್ರೆಸ್ (ಐ) ಸರ್ಕಾರ ತಕ್ಷಣ ಅವರಿಗೆ ರಕ್ಷಣೆ ನೀಡಲು ಅಗ್ನಿವೇಶ ಹಾಗೂ ಅವರ ಸಹ ಪಾದಯಾತ್ರಿಗಳನ್ನು ಬಂಧಿಸಿತು—ಕಾನೂನು ವ್ಯವಸ್ಥೆಗಾಗಬಹುದಾದ ತೊಂದರೆ ತಪ್ಪಿಸಲು! ಅತ್ತ ಸತಿಯ ವೈಭವೀಕರಣದ ವಿರುದ್ಧ ಕಾನೂನನ್ನು ಉಲ್ಲಂಘಿಸಿ, ದೇಶದ ಕಾನೂನನ್ನು ಗಮನದಲ್ಲಿಡಬೇಕೆಂದು ಸರ್ವೋಚ್ಚ ನ್ಯಾಯಾಲಯ ನೀಡಿದ ಆದೇಶವನ್ನೂ ಲೆಕ್ಕಿಸದೆ ಹಿಂದೂ ವಿಧವೆಯರನ್ನು ಸುಡಬೇಕೆಂದು ಧರ್ಮಶಾಸ್ತ್ರಗಳು ಆದೇಶಿಸುತ್ತವೆ ಎಂದು ತಿರುಗಲು ಶಂಕರಾಚಾರ್ಯರಿಗೆ ಪೂರ್ಣ ಸ್ವಾತಂತ್ರ್ಯ!

ಅಗ್ನಿವೇಶರ ಸವಾಲಿನಿಂದ ಭಯಭೀತರಾದ ಶಂಕರಾಚಾರ್ಯ ಹೀಗೆ ಕಾಂಗ್ರೆಸ್ (ಐ) ಸರ್ಕಾರದಿಂದ ರಕ್ಷಣೆ ಗಿಟ್ಟಿಸಿ ಈಗ ಸರ್ವೋಚ್ಚ ನ್ಯಾಯಾಲಯ ತನ್ನ ಅಭಿಪ್ರಾಯ ಕೇಳದೆ ಆದೇಶ ನೀಡಿ ತನ್ನ ಸ್ಥಾನವನ್ನೇ ತಗ್ಗಿಸಿಕೊಂಡಿದೆ ಎಂದು ಹೇಳುವ ಹುಂಬತನ ತೋರುತ್ತಿದ್ದಾರೆ! ಸತಿ ವಿರುದ್ಧ ಕಾನೂನು ತಂದ ಸರ್ಕಾರ ಹಿಂದೂ—ವಿರೋಧಿಯೆನ್ನುತ್ತಿದ್ದಾರೆ; ಈ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆ ನಡೆದರೆ ತಾನು ಸುಲಭದಲ್ಲಿ ಗೆಲ್ಲುವುದಾಗಿ ಸಾರುತ್ತಿದ್ದಾರೆ!

ಸರಕಾರ ಬಾರಿಬಾರಿಗೂ ಧರ್ಮಾಂಧರೆದುರು ಮಂಡಿಯೂರಿ ಹೇಗೆ ಮತೀಯ ಪ್ರತಿಗಾಮಿಗಳು ಸೊಕ್ಕಿನಿಂದ ವರ್ತಿಸಲು ಅವಕಾಶ ಮಾಡಿಕೊಟ್ಟಿದೆ ಎಂಬುದಕ್ಕೆ ಇದೊಂದು ನಿದರ್ಶನ. ಕೆಲವೇ ವರ್ಷಗಳ ಹಿಂದೆ ಈ ದೇಶದಲ್ಲಿ ಜಾತ್ಯತೀತ ಶಕ್ತಿಗಳಿಗೂ ಸರ್ಕಾರಕ್ಕೂ ಈ ರೀತಿ ಸವಾಲೆಸೆಯುವ ಸೊಕ್ಕು ತೋರುವುದು ಯಾವುದೇ ಮತೀಯ ಗುರುವಿಗೆ ಸಾಧ್ಯವಿತ್ತೇ?

ರಾಮಜನ್ಮಭೂಮಿ —— ಬಾಬ್ರಿ ಮಸೀದಿಯ ವ್ಯವಹಾರದಲ್ಲಿ ಮತಾಂಧತೆಗೆ ಉತ್ತರಪ್ರದೇಶ ಕಾಂಗ್ರೆಸ್ (ಐ) ಸರ್ಕಾರ ನೀಡಿದ ಪ್ರೋತ್ಸಾಹದಿಂದ ಎರಡೂ ಕಡೆಯ ಕೋಮುವಾದಿಗಳು ಪರಸ್ಪರ ಕತ್ತುಕೊಯ್ಯಲು ಸದಾ ಸಿದ್ಧರಿರುವಂತಹ ಪರಿಸ್ಥಿತಿ ಉಂಟಾಗಿರುವಾಗ, ಸದ್ಯದಲ್ಲೇ ಚುನಾವಣೆ ನಡೆಸುವ ಬಗ್ಗೆ ಯೋಚಿಸುತ್ತಿರುವ ಸರ್ಕಾರ ಯಾವುದೇ ಜಾತ್ಯಾತೀತ ಮೌಲ್ಯವನ್ನೂ ಎತ್ತಿ ಹಿಡಿಯುವುದಿಲ್ಲ, ತನ್ನ ಕುಚೇಷ್ಟೆ ತಡೆಯುವ ಕಾರ್ಯ ಅದಕ್ಕಿಲ್ಲ ಎಂಬುದು ಶಂಕರಾಚಾರ್ಯರಿಗೆ ಚೆನ್ನಾಗಿ ತಿಳಿದಿರುವುದರಿಂದಲೇ ಅವರು ಈ ದಾಷ್ಟ್ಯ ತೋರುತ್ತಿದ್ದಾರೆ.

ಮಹಿಳೆಯರ ಹಕ್ಕುಗಳು ಮತ್ತು ಅಭಿವೃದ್ಧಿ ಬಗ್ಗೆ ರಾಜೀವ್ ಸರ್ಕಾರ ಮತ್ತು ಕಾಂಗ್ರೆಸ್ (ಐ)ನ ಇಬ್ಬಂದಿತನ, ಗೋಸುಂಬಿತನ ಮತ್ತೆ ಬಯಲಾಗಿದೆ ಈಗ, ಇತ್ತೀಚೆಗೆ ಬಹುಶಃ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರ ಹಕ್ಕುಗಳ ರಕ್ಷಣೆ ಮತ್ತು ಅಭಿವೃದ್ಧಿಯ ಹಲವು ಯೋಜನೆಗಳ ಡಂಗುರ ಹೊಡೆದಿರುವ ಸರ್ಕಾರ ಈಗ ಮಹಿಳೆಯರಿಗೆ ಇನ್ನೊಂದು ಬಹುಮಾನ ನೀಡಿದೆ: ಅದೇ ಗಂಡನೊಂದಿಗೆ ಸುಡಿಸಿಕೊಳ್ಳುವ ವಿಧವೆಯ ಹಕ್ಕು! ಉತ್ತರ ಪ್ರದೇಶ ಸರ್ಕಾರ ಶಂಕರಾಚಾರ್ಯರನ್ನು ಸುಪ್ರೀತಗೊಳಿಸಲು ನಡೆಸಿರುವ ಈ ಪ್ರಯತ್ನವನ್ನು ಮಹಿಳೆಯರು ಮತ್ತು ಅವರ ಸಂಘಟನೆಗಳು ಗಂಭೀರವಾಗಿ ಗಮನಿಸಬೇಕು.

ಸಂಸತ್ತಿನಲ್ಲಿ ರಾಜೀವಗಾಂಧಿಗಿರುವ ಅಗಾಧ ಬಹುಮತಕ್ಕೆ ಕಳೆದ ಚುನಾವಣೆಗಳಲ್ಲಿ ಇಂದಿರಾಗಾಂಧಿಯವರ ಅಮಾನುಷ ಕೊಲೆಯ ಭಾವನಾತ್ಮಕ ಪ್ರಭಾವಕ್ಕೊಳಗಾಗಿ ಮಹಿಳೆಯರು ನೀಡಿದ ಅಪಾರ ಮತಗಳೂ ಸಾಕಷ್ಟು ಕಾರಣ. ಅವರ ಆ ಮತಗಳನ್ನೂ ಸತಿಯ ಹೆಸರಿನಲ್ಲಿ ಸುಡಲು ಲೈಸೆನ್ಸ್ ನೀಡಲು ದುರುಪಯೋಗಪಡಿಸಲಾಗುತ್ತಿದೆ. ಶಂಕರಾಚಾರ್ಯರ ಎದುರು ಈ ಸರ್ಕಾರೀ ಶರಣಾಗತಿಯನ್ನು ಎಲ್ಲ ವಿಭಾಗದ ಮಹಿಳೆಯರೂ ಏಕಕಂಠದಿಂದ ಖಂಡಿಸಬೇಕು; ಸತಿಯನ್ನು ಸಮರ್ಥಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಬೇಕು.

ಸನಾತನ ಧರ್ಮದ ಹೆಸರಿನಲ್ಲಿ ತೀವ್ರ ಪ್ರತಿಗಾಮಿ ದೃಷ್ಟಿಕೋನದ ಪ್ರತಿನಿಧಿ ಈ ಶಂಕರಾಚಾರ್ಯರು. ಪಾಪ! ಇದರಿಂದಾಗಿ ವಾಜಪೇಯಿಯವರು ಭಾರತದ ಜಾತಿಪದ್ಧತಿಯ ಬಿರುಸನ್ನು ಮರೆಮಾಚಲು ಪ್ರಯತ್ನಿಸಿ ಇಕ್ಕಟ್ಟಿನಲ್ಲಿ ಸಿಲುಕಿಕೊಂಡರು. ಪತ್ರಿಕಾ ವರದಿಗಳ ಪ್ರಕಾರ ಕಠ್ಮಂಡುವಿನಲ್ಲಿ ವಿಶ್ವಹಿಂದೂ ಸಮ್ಮೇಳನದಲ್ಲಿ ಮಾತನಾಡುತ್ತಾ ಅವರು "ಬ್ರಾಹ್ಮಣ ಎಂದೆನಿಸಿಕೊಳ್ಳುವುದು ಜನ್ಮದಿಂದಲ್ಲ, ಕರ್ಮದಿಂದ" ಎಂದು ಹೇಳಿದುದನ್ನು ಟೀಕಿಸುತ್ತಾ ಇದೇ ಶಂಕರಾಚಾರ್ಯರು ವಾಜಪೇಯಿಯವರ ಈ ಹೇಳಿಕೆದಿಂತ ಹೆಚ್ಚು ಅಜ್ಞಾನ ಪ್ರದರ್ಶಿಸುವ ಹೇಳಿಕೆ ಬೇರೆ ಇರಲಾರದು ಎಂದರಂತೆ!

ಅಂದರೆ ಈ ಮಹಾನ್ ಜಗದ್ಗುರು ಸತಿಯ ಹೆಸರಿನಲ್ಲಿ ಸುಡುವುದನ್ನು ಮಾತ್ರವಲ್ಲ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಮುಸ್ಲಿಮರ ಬಗ್ಗೆ ಅವರ ದೃಷ್ಟಿಕೋನ ಏನಿರಬಹುದೆಂಬುದನ್ನು ಸುಲಭವಾಗಿ ಊಹಿಸಬಹುದು. ಇಂತಹವರು ಜನಾಭಿಪ್ರಾಯ ಸಂಗ್ರಹಣೆ ನಡೆಸಿ ಎಂಬ ಸವಾಲೆಸೆಯುವ ಹುಂಬತನ ತೋರುತ್ತಿರುವುದು ರಾಜೀವ ಸರ್ಕಾರದ ಮಂಡಿಯೂರುವ ಧೋರಣೆಗಳು ಮತಾಂಧ ಶಕ್ತಿಗಳಾಗಲಿ ಎಂತಹ ಆತ್ಮವಿಶ್ವಾಸ ಮೂಡಿಸಿದೆ ಎಂಬುದಕ್ಕೆ ನಿದರ್ಶನ.

ಇನ್ನೊಂದು ಘಟನೆ ಕಾಂಗ್ರೆಸ್ (ಐ) ನ ಸಂದರ್ಭಸಾಧಕತನವನ್ನು ಮತ್ತೊಮ್ಮೆ ಬಯಲಿಗೆಳೆದಿದೆ. ಪಂಜಾಬಿನಲ್ಲಿ ಹಿಂದೂ-ಸಿಖ್ಖ್ ಐಕ್ಯತೆ ಕಾಪಾಡಲು ಪ್ರತ್ಯೇಕತಾವಾದಿಗಳ ವಿರುದ್ಧ ಎಡ ಪಕ್ಷಗಳ ಕಾರ್ಯಕರ್ತರು ಜೀವದ ಹಂಗುತೊರೆದು ಕಾದಾಡುತ್ತಾ, ಈ ಪವಿತ್ರ ಹೋರಾಟದಲ್ಲಿ ತಮ್ಮ ರಕ್ತವನ್ನೇ ಬಸಿಯುತ್ತಿದ್ದರೆ, ಇನ್ನೊಂದೆಡೆ ಶಿವಸೇನೆಯ ಮುಖಂಡ ಬಾಳ ಠಾಕ್ರೆ ಮಹಾರಾಷ್ಟ್ರದಲ್ಲಿ ಸಿಖ್ಖರ ಆರ್ಥಿಕ ಬಹಿಷ್ಕಾರದ ಕರೆ ನೀಡುತ್ತಾನೆ! ಅಕಾಲ್ ತಖ್ತ್ ಭಯೋತ್ಪಾದಕರಿಗೆ ಹಣ ಸಹಾಯ ನೀಡುವವರನ್ನು ಖಂಡಿಸುವಂತೆ ಒತ್ತಡ ತರಲು ಈ ಬಹಿಷ್ಕಾರ ಹಾಕಬೇಕಂತೆ. ಹಿಂದೂ ಪ್ರಾಮಾಣಿಕರ ಭಯಾನಕ ಕೊಲೆಗಳ ನಂತರ ಈ ಸಾಮೂಹಿಕ ಹತ್ಯೆ ಎಬ್ಬಿಸಿದ್ದ ಭಾವನೆಗಳ ದುರ್ಲಾಭ ಪಡೆಯಲು ಆತ ಈ ಕರೆ ನೀಡಿದ್ದ: ಇದು ಕೋಮು ಗಲಭೆಯ ವಾತಾವರಣ ಹುಟ್ಟಿಸಿ ಸಿಖ್ಖರ ಕುಟುಂಬಗಳು ಪಂಜಾಬಿಗೆ ವಲಸೆ ಹೋಗುವಂತೆ ಮಾಡಿದ್ದರೂ ಆತ ಖಾಲಿಸ್ತಾನೀ ಭಯೋತ್ಪಾದಕರ ಬಯಕೆಯನ್ನೇ ಈಡೇರಿಸಿದಂತಾಗಿತ್ತು !

ಠಾಕ್ರೆಯ ಕರೆ ಒಂದು ಈ ದೇಶ-ವಿರೋಧಿ ಹೆಜ್ಜೆ, ಕೋಮುಉದ್ವೇಗ ಹಂಚುವ ಕರೆ. ಆದರೆ ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಅಥವಾ ಮಹಾರಾಷ್ಟ್ರ ಸರ್ಕಾರ ಏನಾದರೂ ತುರ್ತು ಕ್ರಮ ಕೈಗೊಂಡಿತೇ? ಈ ಕರೆಯನ್ನೂ ಖಂಡಿಸುವಂತೆ ಜನಾಭಿಪ್ರಾಯ ಮೂಡಿಸಲು ಕರೆ ನೀಡಿತೇ? ಸಿಖ್ಖರಿಗೆ ರಕ್ಷಣೆಯ ಭರವಸೆ ನೀಡಿತೇ? ಏನೂ ಇಲ್ಲ, ವಿಧಾನ ಸಭೆಯಲ್ಲಿ ಸಾಕಷ್ಟು ಗಲಾಟೆ ನಡೆಸಿದ ಮೇಲೆ, ಠಾಕ್ರೆ ಕರೆ ನೀಡಿದ ಬಹಳ ದಿನಗಳ ನಂತರವಷ್ಟೇ ಮುಖ್ಯ ಮಂತ್ರಿ ಚವ್ಹಾಣ್ ಕ್ರಮ ಕೈಗೊಳ್ಳುವ ಮಾತಾಡಿದರು.

ಇದು ಸ್ವಾಭಾವಿಕವೇ ಆಗಿತ್ತು: ಯಾಕೆಂದರೆ ಕಾಂಗ್ರೆಸ್(ಐ) ನ ಒಂದು ವಿಭಾಗ ಠಾಕ್ರೆಯೊಂದಿಗೆ ಶಾಮೀಲಾಗಿ ಕೆಲಸ ಮಾಡುತ್ತಲೇ ಇದೆ, ಇದರ ಇತ್ತೀಚಿನ ಫಲವೆಂದರೆ ಮುಂಬೈನಲ್ಲಿ ವಿಧಾನ ಸಭಾ ಚುನಾವಣೆಯಲ್ಲಿ ಶಿವಸೇನೆಯ ಅಭ್ಯರ್ಥಿ ಕಾಂಗ್ರೆಸ್ (ಐ) ಅಭ್ಯರ್ಥಿಯನ್ನು ಸೋಲಿಸಿರುವುದು, ಮಹಾರಾಷ್ಟ್ರದ ಎಲ್ಲಾ ಮುಖ್ಯಮಂತ್ರಿಗಳು ಬಾಳ ಠಾಕ್ರೆಗೆ ಶ್ರದ್ಧಾಸುಮನಗಳನ್ನು ಅರ್ಪಿಸುತ್ತಲೇ ಬಂದಿದ್ದಾರೆ, ಈಗಿನ ಮುಖ್ಯಮಂತ್ರಿ ಚವ್ಹಾಣ್ ಕೂಡಾ ಆತ ಒಬ್ಬ ಜನಪರ ವ್ಯಕ್ತಿಯೋ ಎಂಬಂತೆ ಬಹಳ ಮುಲಾಜಿನಿಂದ, ಸೌಮ್ಯ ನಿಲುವಿನಿಂದಲೇ ಆತನ ವಿರುದ್ಧ ಕ್ರಮ ಕೈಗೊಳ್ಳಲು ಒಪ್ಪಿರುವುದು! ಏನದು ಅಂತಹ ಕ್ರಮ? ಕೇವಲ ಒಂದು ಕ್ರಿಮಿನಲ್ ದೂರು ಸಲ್ಲಿಸುವುದಷ್ಟೆ.

ಇಂತಹ ಕ್ರಮದ ಭರವಸೆ ಇದು ಮೊದಲಬಾರಿಯೇನಲ್ಲ. ಧೀರ್ಘ ಸಮರದಿಂದ ಬಾಳ ಠಾಕ್ರೆ ಮುಸ್ಲಿಮರ ವಿರುದ್ಧ ಉದ್ವೇಗಕಾರಿ ಭಾಷಣ ಮಾಡುತ್ತಲೇ ಇದ್ದಾನೆ. ಆದರೆ ಆತನ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಒಮ್ಮೆ ಮಾತ್ರ ಆತ ಅತ್ಯಂತ ಉನ್ಮಾದಕಾರೀ ಭಾಷಣ ಮಾಡಿದ ಎಂದು ಪತ್ರಿಕೆಗಳು ವರದಿ ಮಾಡಿದ ಮೇಲೆ ನಿರ್ವಾಹವಿಲ್ಲದೇ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಲಾಗಿತ್ತು. ಆದರೆ ಕೆಲವು ವಾರಗಳ ನಂತರ ಈ ಭರವಸೆಯನ್ನು ಸರ್ಕಾರ ಮುರಿಯಿತು, ಕೊಟ್ಟ ಕಾರಣವೇನು ಗೊತ್ತೇ? ಠಾಕ್ರೆ ಭಾಷಣದ ಧ್ವನಿ ಮುದ್ರಣ ಅಸ್ಪಷ್ಟವಾಗಿತ್ತು! ಮತ್ತು ಕೆಟ್ಟು ಹೋಗಿತ್ತು, ಈ ಭಾರಿಯೂ ಹೀಗೆ ವಚನಭಂಗ ನಡೆಯಲಿಕ್ಕಿಲ್ಲವೆಂದೇನೂ ಗ್ಯಾರಂಟಿಯಿಲ್ಲ.

ಇವೆಲ್ಲಾ ತೋರಿಸಿ ಕೊಡುವ ಅಂಶ ಒಂದೇ, ರಾಜೀವ್ ಸರ್ಕಾರ ಠಾಕ್ರೆಯನ್ನಾಗಲೀ, ಶಂಕರಾಚಾರ್ಯರನ್ನಾಗಲೀ ಅಕಾಲ್ ತಖ್ತನ್ನಾಗಲೀ, ಇಸ್ಲಾಮೀ ಮೂಲಭೂತವಾದಿಗಳನ್ನಾಗಲೀ ಹತೋಟಿಯಲ್ಲಿ ಇಡುವುದಿಲ್ಲ. ಇವರ ಮೇಲೆ ಹತೋಟಿಯಿಡಲು ಬೇಕಾದಿರುವುದು ಜನಪರ ಶಕ್ತಿಗಳ ಪ್ರತಿಕ್ರಿಯೆ ಮತ್ತು ಮಧ್ಯಪ್ರವೇಶ, ಇಂತಹ ಪ್ರತಿಕ್ರಿಯೆ ಇಲ್ಲದಿದ್ದರೆ ಪ್ರತಿಗಾಮಿಗಳಿಗೆ ಇನ್ನಷ್ಟು ಪ್ರೋತ್ಸಾಹ ಸಿಕ್ಕಂತಾಗಿ ಮತಾಂಧರು ಮತ್ತು ಸರ್ಕಾರವೇ ಪರಸ್ಪರ ಒಪ್ಪಂದ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ, ದೇಶದ ಐಕ್ಯತೆ ವಿರುದ್ಧ ಈ ಪಿತೂರಿಗಳನ್ನು ವಿಫಲಗೊಳಿಸಲು ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಶಕ್ತಿಗಳು ತಮ್ಮ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿ ಮತಾಂಧತೆಯನ್ನು ವಿರೋಧಿಸಬೇಕು, ಮತಾಂಧ ಶಕ್ತಿಗಳಿಗೆ ತಲೆ ಬಾಗುವ ಸರ್ಕಾರದ ಧೋರಣೆಯನ್ನೂ ಸೋಲಿಸಬೇಕು.

ಬೀಡಿ ಅಂಡ್ ಟೊಬೆಕೊ ಯುನಿಯನ್ ಮಹಾಸಭೆ

ಹೋರಾಟದ 46 ವರ್ಷಗಳ ಭವ್ಯ ಪರಂಪರೆಯಿರುವ ಬೀಡಿ ಕಾರ್ಮಿಕ ಚಳುವಳಿ ಸಂಘಟನಾ ಪ್ರಜ್ಞೆಯೊತಗೆ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ ತಮ್ಮ ಮೂಲಭೂತ ಹಕ್ಕುಗಳ ಸಂರಕ್ಷಣೆಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ವಿಶಾಲ ಸಂಘಟನೆ ಕಟ್ಟಲು ಸಿ.ಐ.ಟಿ.ಯು ಮುಂದಾಳು ಕಾ॥ ಡೇವಿಡ್ ಎ. ಕರ್ಕಡರು ಕರೆನೀಡಿದರು ಮಾರ್ಚ್ 18 ರಂದು ಉಡುಪಿಯಲ್ಲಿ ಜರುಗಿದ ಬೀಡಿ ಅಂಡ್‌ಟೊಬೆಕೊ ಲೇಬರ್ ಯುನಿಯನ್ ವಾರ್ಷಿಕ ಮಹಾಸಭೆಯಲ್ಲಿ ಅವರುಮಾತಾಡುತ್ತಿದ್ದರು. ಕಾ॥ಗುರುವಪೂಜಾರಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿ ಬೀಡಿ, ಎಲೆ, ತಂಬಾಕಿನ ಎಮರೇಜು ಹೆಸರಿನಲ್ಲಿ ಮತ್ತು ಪ್ರಾವಿಡೆಂಟ್ ಫಂಡ್‌ನ ರಶೀದಿಯೂ ಸೇರಿದಂತೆ ಕನಿಷ್ಠ ಕೂಲಿ ನೀಡುವಲ್ಲಿ ಬೀಡಿ ಕಾರ್ಮಿಕರಿಗಾಗಿರುವ ಅನ್ಯಾಯದ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು, ಕಾ॥ ಎನ್. ಸಾಧು ಅಮೀನ ವರದಿ ಮಂಡಿಸಿದರು, ಚರ್ಚೆ ನಂತರ ವರದಿ ಅಂದೀಕರಿಸಲಾಯಿತು,

ಪ್ರಸ್ತುತ ಸಾಲಿಗೆ ಕಾ॥ ಎನ್, ಸಾಧು ಅಮೀನ (ಅಧ್ಯಕ್ಷ) ಶ್ರೀಮತಿ ಬೇಬಿ ಮತ್ತು ಸುನಂದ (ಉಪಾಧ್ಯಕ್ಷೆ)ಗುರುವ ಪೂಜಾರಿ (ಪ್ರ, ಕಾರ್ಯದರ್ಶಿ) ಗಿರಜ ಮತ್ತು ನಾಗಪ್ಪ ಪೂಜಾರಿ (ಜೊತೆ ಕಾರ್ಯದರ್ಶಿಗಳು) ಕೆ, ರಾಘವ ಕೋಶಾಧಿಕಾರಿಯನ್ನೊಳಗೊಂಡ 19 ಮಂದಿ ಸಮಿತಿ ಆರಿಸಲಾಯಿತು,

ಎಸ್. ಎಫ್. ಐ. ಡಿ. ವೈ.ಎಫ್. ಐ., ಹೋರಾಟಗಳು

ಅದ್ವಿತೀಯ ಸಂಘಟನೆ ಡಿ. ವೈ. ಎಫ್. ಐ.

ಬಡತನ, ಅನಕ್ಷರತೆ, ನಿರುದ್ಯೋಗ, ಶೋಷಣೆ ಪದ್ಧತಿಯಂತಹ ಮೂಲ ಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಡಿ.ವೈ.ಎಫ್.ಐ. ಸಂಘಟನೆ ಹೋರಾಟ ನಡೆಸುತ್ತಿರುವ ಪ್ರಪಂಚದ 2ನೇ ಅತ್ಯಂತ ಬಲಿಷ್ಟವಾದ ಯುವ ಜನ ಸಂಘಟನೆಯಾಗಿದೆ ಎಂದು ಎಸ್. ಎಫ್.ಐ. ರಾಜ್ಯ ಅಧ್ಯಕ್ಷ ಕಾ॥ ಜಿ.ಸಿ. ಬೈಯ್ಯಾರೆಡ್ಡಿಯವರು ಮೈಸೂರು ಜಿಲ್ಲೆಯ ಹನಗೊಂಡ ಗ್ರಾಮದಲ್ಲಿ ಘಟಕ ಏರ್ಪಡಿಸಿದ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಹನಗೊಂಡ ಶಾಲೆಗೆ ಕನಿಷ್ಠ ಸೌಲಭ್ಯಗಳಾದ ಟೇಬಲ್, ಬೆಂಚುಗಳು ಸಹ ಇಲ್ಲದೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯುಂಟಾಗಿದ್ದು ಈ ಸಮಸ್ಯೆಯನ್ನು ಒಳಗೊಂಡ 'ಕಲಿತ ಕಳ್ಳ' ಎಂಬ ನಾಟಕ ಪ್ರದರ್ಶನವನ್ನು ನಡೆಸಲಾಯಿತು. ಹುನಸೂರು ತಾಲ್ಲೂಕು ಘಟಕದ ಅಧ್ಯಕ್ಷ ಕಾ॥ ದೇವರಾಜ್ ಮಂಡಲ ಪಂಚಾಯ್ತಿ ಸದಸ್ಯ ಬಸವರಾಜ್ ಮುತ್ತಿತರರು ಮಾತನಾಡಿದರು. ಮಂಡಲ ಪ್ರಧಾನರಾದ ಪ್ರಾಣೇಶ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನೂರಾರು ಮಂದಿ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕ್ರೀಡಾ-ಸಾಂಸ್ಕೃತಿಕ ಘಟಕ ರಚನೆ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್.ಐ.) ಹೊಸಪೇಟೆ ನಗರ ಸಮಿತಿ ಸಭೆ ಕಾ॥ ಜಂಬಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಯುವಜನತೆಯಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಪ್ರತಿಭೆಯನ್ನು ಬೆಳೆಸಲು ಡಿ.ವೈ.ಎಫ್.ಐ. ಹೆಚ್ಚಿನ ಆಸಕ್ತಿ ವಹಿಸಿ ಪ್ರೋತ್ಸಾಹಿಸಲು ತೀರ್ಮಾನಿಸಿ ಕ್ರೀಡಾ ಮತ್ತು ಸಾಂಸ್ಕೃತಿಯ ಉಪಸಮಿತಿಯೊಂದನ್ನು ರಚಿಸಲಾಯಿತು. ಕ್ರೀಡಾ ಸಮಿತಿಯ ಸಂಚಾಲಕರಾಗಿ ಕಾ॥ ಎಂ, ಡಿ. ಜಾನ್, ವಾಮಲಾಲ್, ಬಸವರಾಜ್, ಪಾರ್ಥಿಬೇಹನ್, ಜಿ. ಮೋಹನ್, ಆಯ್ಕೆಗೊಂಡರು,

ಸಾಂಸ್ಕೃತಿಕ ಸಮಿತಿ ಸಂಚಾಲಕರಾಗಿ ಕಾ॥ ಆರ್. ಎಸ್, ನಾಗರಾಜ್, ಎಂ, ಮಹೇಶ್, ಜಗದೀಶ್, ಸತ್ಯನಾರಾಯಣ್ ಆಯ್ಕೆಗೊಂಡರು.

ಉಚಿತ ಬೋಧನಾ ಶಾಲೆ ಸಮಾರೋಪ

ಅಭ್ಯಾಸ ಮತ್ತು ಹೋರಾಟದ ಗುರಿ ಹೊಂದಿರುವ ಎಸ್. ಎಫ್. ಐ. ಸಂಘಟನೆ ವಿದ್ಯಾರ್ಥಿಗಳಲ್ಲಿ ಎಲ್ಲಾ ರೀತಿಯ ಪ್ರತಿಭೆ ಬೆಳೆದು ಬರುವಂತಾಗಲು ಸತತವಾಗಿ ಶ್ರಮಿಸುತ್ತಾ ಬಂದಿದೆ. ರಾಜ್ಯದ ಹಲವಾರು ಎಸ್. ಎಫ್. ಐ. ಘಟಕಗಳು ತಮ್ಮ ಪರಿಸರದಲ್ಲಿರುವ ವಿದ್ಯಾರ್ಥಿ ಸಮುದಾಯ ಶೈಕ್ಷಣಿಕವಾಗಿ ಉನ್ನತ ಜ್ಞಾನ ಪಡೆಯಲು ತನ್ನ ಅಳಿಲು ಸೇವೆ ಸಲ್ಲಿಸುತ್ತಾ ಬರುತ್ತಿವೆ. ಇಂತಹ ಘಟಕಗಳಲ್ಲೊಂದು ಹೊಸಪೇಟೆ ನಗರಸಮಿತಿ.

ಕಳೆದ 1984–85 ರಿಂದಲೂ ವಿದ್ಯಾರ್ಥಿಗಳಿಗೆ ಉಚಿತ ಬೋಧನಾ ತರಗತಿಗಳನ್ನು ನಗರದ ಬಾಲಕಿಯರ ಜ್ಯೂನಿಯರ್ ಕಾಲೇಜಿನಲ್ಲಿ ನಡೆಸುತ್ತಾ ಬರುತ್ತಿದೆ.

ಫೆಬ್ರವರಿ 28 ರಂದು ನಡೆದ ವಾರ್ಷಿಕ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ವಾಸವಿ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಶ್ರೀ ವೈ. ಭೀಮಸೇನಾಚಾರ್‌ರವರು ಟ್ಯೂಷನ್‌ಫೀ, ಡೊನೇಷನ್‌ಫೀ ಹಾವಳಿಯಿಂದ ತತ್ತರಿಸುತ್ತಿರುವ ಬಡ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿ ಕಾರ್ಯವನ್ನು ಮಾಡುತ್ತಿರುವ ಎಸ್. ಎಫ್. ಐ. ಸಂಘಟನೆಯನ್ನು ಅವರು ಅಭಿನಂದಿಸಿದರು. ವಿಜಯನಗರ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀ ಟಿ, ಪರಮೇಶ್ವರನ್‌ಅವರು ಮಾತನಾಡಿದರು. ರಾಜ್ಯ ಎಸ್. ಎಫ್ ಐ. ಸಹಕಾರ್ಯದರ್ಶಿ ಎಲ್. ಮಂಜುನಾಥ್ ಜಿಲ್ಲಾಧ್ಯಕ್ಷ ಷಣ್ಮುಖಪ್ಪ ಎಸ್. ಎಫ್. ಐ. ಸಂಘಟನೆ ಧ್ಯೇಯ ಧೋರಣೆ ಕುರಿತು ಮಾತನಾಡಿದರು. ವಿವಿಧ ಮುಖಂಡರುಗಳು ಶುಭ ಹಾರೈಸಿದರು,

ಡಿ. ವೈ. ಎಫ್.ಐ. ಘಟಕ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಕಳ್ಳಬೋಚನಹಳ್ಳಿಯಲ್ಲಿ ಏಪ್ರಿಲ್ 12ರಂದು ಡಿ.ವೈ ಎಫ್.ಐ. ಘಟಕ ರಚಿಸಲಾಯಿತು. ರೈತ ಸಂಘದ ಮುಖಂಡ ಕಾ॥ ಬಿ.ಸಿ. ಅಪ್ಪಣ್ಣ ಘಟಕ ಉದ್ಘಾಟಿಸಿದರು. ಗ್ರಾಮಾಂತರ ಪ್ರದೇಶದಲ್ಲಿ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಯುವ ಜನತೆ ಹೋರಾಟ ನಡೆಸಬೇಕೆಂದು ಮಾತನಾಡಿದ ಭಾಷಣಕಾರರು ಕರೆ ನೀಡಿದರು. ಘಟಕದ ಅಧ್ಯಕ್ಷರಾಗಿ ಕಾ॥ ಪ್ರಭಾಕರ ಹೆಗಡೆ ಬಾಲಕೃಷ್ಣ (ಉಪಾಧ್ಯಕ್ಷ), ಶಿವಕುಮಾರ್ (ಕಾರ್ಯದರ್ಶಿ) ಮಾದೇಗೌಡ (ಉಪ ಕಾರ್ಯದರ್ಶಿ) ಯಲ್ಲಪ್ಪ ಖಜಾಂಚಿಯವರನ್ನೊಳಗೊಂಡ ಸಮಿತಿಯನ್ನು ಆಯ್ಕೆಮಾಡಲಾಯಿತು.

ಜನ ವಿರೋಧಿ ಶಿಕ್ಷಣ ನೀತಿ ಧಿಕ್ಕರಿಸಲು ಕರೆ

ಗುಲ್ಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಫೆಬ್ರವರಿ 28ರಂದು ಎಸ್.ಎಫ್.ಐ., ವಿ.ವಿ, ಸಂಘಟನಾ ಸಮಿತಿ ಆಶ್ರಯದಲ್ಲಿ 'ನೂತನ ಶಿಕ್ಷಣ ನೀತಿ' ಕುರಿತು ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಹರಪನಹಳ್ಳಿ ಬಿ.ಇ.ಡಿ. ಕಾಲೇಜಿನ ಉಪನ್ಯಾಸಕರಾದ ಶ್ರೀ ಡಿ.ಬಿ. ಬಡಿಗೇರರವರು ಭಾಗವಹಿಸಿದ್ದರು. ನೂತನ ಶಿಕ್ಷಣ ನೀತಿಯ ಶಿಫಾರಸ್ಸಿನಂತೆ ನವೋದಯ ಶಾಲೆಗಳು, ಕಾಲೇಜುಗಳಿಗೆ ಸ್ವಾಯತ್ತತೆ, ತೆರೆದ ವಿಶ್ವವಿದ್ಯಾಲಯಗಳ ಪ್ರಾರಂಭದಿಂದ ವಿದ್ಯಾರ್ಥಿಗಳಿಗುಂಟಾಗುವ ಗಂಭೀರವಾದ ಸಮಸ್ಯೆಗಳ ಕುರಿತು ಅವರು ಹೇಳುತ್ತಾ ಶಿಕ್ಷಣನೀತಿ ಆಳುವ ವರ್ಗದ ಅಗತ್ಯತೆಗಳಿಗೆ ಅನುಗುಣವಾಗಿ ಇದೆಯೆಂದು ಸಹಜವಾಗಿಯೇ ಇದು ಜನಸಾಮಾನ್ಯರ ವಿರೋಧಿಯಾಗಿರುವುದರಿಂದ ನೂತನ ಶಿಕ್ಷಣ ನೀತಿ ವಿರುದ್ಧ ದೇಶವ್ಯಾಪಿಯಾಗಿ ಜನತೆ ಹಾಗೂ ವಿದ್ಯಾರ್ಥಿ ಸಮುದಾಯ ಜಾಗೃತರಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಜಿಲ್ಲಾ ಸಂಘಟನಾ ಸಮಿತಿ ಸಹ ಸಂಚಾಲಕ ಕಾ॥ ಕೆ.ಎನ್. ರಾಮಾಂಜನೇಯ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯ ಕಾ॥ ಸಿದ್ದಪ್ಪ ಕುಕನಪಳ್ಳಿ ಸ್ವಾಗತಿಸಿದರು.

(4ನೇ ಪುಟದಿಂದ)

ತ್ಮಕವಾದ ಜಾಗತಿಕ ಕಣ್ಣೋಟವಾಗುವುದು. ಕೆಲಸಗಳ ನಿಯಂತ್ರಣ, ಯೋಜನೆ ಮತ್ತು ಕೇಂದ್ರೀಕರಣವನ್ನು ರಾಜ್ಯ ಮಾಡುವುದು.

ಕಮ್ಯೂನಿಸ್ಟ್ ಪ್ರಣಾಳಿಕೆಯ 140 ವರ್ಷಗಳ ಚರಿತ್ರೆಯುದ್ದಕ್ಕೂ ಇದನ್ನು ನಿಷೇದಿಸಲು, ಮೂಕನನ್ನಾಗಿಸಲು ವೈರಿಗಳು ಅಸಂಖ್ಯಾತ ಪ್ರಯತ್ನಗಳನ್ನು ಮಾಡಿರುತ್ತಾರೆ. ಇದನ್ನು ಜರಿಯಲು, ವಿಕೃತಿಗೊಳಿಸಲು, ಅಪಪ್ರಚಾರ ಮಾಡಲು, ಸುಟ್ಟು ಹಾಕಲು ಅವರು ಪ್ರಯತ್ನಿಸಿದ್ದಾರೆ. ಈ ಪುಸ್ತಕದ ಪ್ರತಿಯನ್ನು ಹೊಂದಿರುವುದೇ ಭಯಂಕರವಾದ ಅಪರಾಧವೆಂದು ಫ್ಯಾಸಿಸ್ಟರು ಪ್ರತಿಪಾದಿಸಿದ್ದರು. ಆದರೆ ಈ ಎಲ್ಲಾ ಪ್ರಯತ್ನದಿಂದಾಗಿ ಪ್ರಣಾಳಿಕೆಯ ಸಂದೇಶ ತನ್ನ ಮಹತ್ವವನ್ನು ಕಳೆದುಕೊಳ್ಳಲಿಲ್ಲ. ಒಂದೇ ಬಂಡೆಯಿಂದ ಕಂಡರಿಸಿದ ಕಲ್ಲಿನಂತೆ ಈಗಲೂ ದೃಢವಾಗಿದೆ. ಅಂತಿಮ ವಿಮೋಚನೆಯ ಹಾದಿಯಲ್ಲಿ ಮಾನವನ ಮುನ್ನಡೆಯ ಆರಂಭ ಇದಾಗಿದೆ,

"....ಈ ಕಿರುಹೊತ್ತಿಗೆ ಇಡೀ ಸಂಪುಟಗಳಿಗೆ ಸಮಾನವಾದದ್ದು, ನಾಗರಿಕ ಜಗತ್ತಿನ ಎಲ್ಲಾ ಸಂಘಟಿತ ಹಾಗೂ ಹೋರಾಟಗಾರ ಕಾರ್ಮಿಕ ವರ್ಗಕ್ಕೆ ಇದು ಇಂದಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದು—ಮಾರ್ಗದರ್ಶನ ಮಾಡುತ್ತಿದೆ...."

ಕುಮಾರ್ ಕುಂದಾಪುರ

(ಕೃಪೆ: STP)

ಅಫಘಾನಿಸ್ತಾನ:ರಾಜಕೀಯ ಚಿಂತನೆಯ ಪ್ರತೀಕ

ಅಫಘಾನಿಸ್ತಾನದಿಂದ ಸೋವಿಯೆತ್ ಪಡೆಗಳ ವಾಪಸಾತಿ ಮೇ 15 ರಿಂದ ಆರಂಭವಾಗಲಿದೆ ಎಂದು ಈಚೆಗೆ ಸೋವಿಯೆತ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಮಿಖಾಯಿಲ್ ಗೋರ್ಬಚೆವ್ ಪ್ರಕಟಿಸಿದರು. ಈ ಮಹತ್ವದ ಹೇಳಿಕೆ ಆಲಿಸಿ ಸಮಗ್ರ ಸೋವಿಯೆತ್ ಜನತೆ ನೆಮ್ಮದಿಯ ನಿಟ್ಟುಸಿರು ಚೆಲ್ಲಿದ್ದಾರೆ. ಅಫಘಾನ್ ಸಮಸ್ಯೆಯ ಇತ್ಯರ್ಥಕ್ಕೆ ನೆರವಾಗಲು ಜಿನಿವಾದಲ್ಲಿ ಮಾರ್ಚ್ 15 ರ ಒಳಗಾಗಿ ಒಂದು ಒಪ್ಪಂದ (ಪಾಕಿಸ್ತಾನ ನಡುವೆ) ವಾಗಬಹುದು ಎಂಬ ಆಶಯದಿಂದ ಗೋರ್ಬಚೆವ್ ಈ ಹೇಳಿಕೆ ನೀಡಿದ್ದಾರೆ.

ಅಫಘಾನಿಸ್ತಾನದ ಸರಕಾರ ಅನುಷ್ಠಾನಗೊಳಿಸಿರುವ ರಾಷ್ಟ್ರೀಯ ಪುನರೈಕ್ಯ ಧೋರಣೆ ಅದರ ರಾಜಕೀಯ ದಿಟ್ಟತನದ ಪ್ರತೀಕ ಎಂದು ಸೋವಿಯೆತ್ ಒಕ್ಕೂಟ ನಂಬಿದೆ. ದೇಶದಲ್ಲಿ ಸಶಸ್ತ್ರ ಹೋರಾಟ ನಿಲ್ಲಬೇಕು ಎಂದು ಕಾಬೂಲ್ ಆಡಳಿತ ಅಗ್ರಹ ಪೂರ್ವಕವಾಗಿ ಮನವಿ ಮಾಡಿದೆ. ಎಡಪಕ್ಷಗಳೊಂದಿಗೆ ಅಧಿಕಾರ ಹಂಚಿಕೊಳ್ಳಲು ಅದು ಸಿದ್ಧವಿದೆ. ದೇಶದ ಸರಕಾರದ ವಿರುದ್ಧ ಹೋರಾಡುತ್ತಿರುವ ಗುಂಪುಗಳ ಪ್ರತಿನಿಧಿಗಳೊಂದಿಗೂ ಅಧಿಕಾರ ಹಂಚಿಕೊಳ್ಳಲು ಅದು ಬಯಸಿವೆ. ತಮ್ಮ ದೇಶದಲ್ಲಿ ಸಮ್ಮಿಶ್ರ ಸರಕಾರ ರಚನೆಯಾಗುವುದಿದ್ದರೆ ಅದರ ಸ್ವರೂಪ ಹಾಗೂ ವ್ಯಾಪ್ತಿ ಹೇಗಿರಬೇಕು ಎಂಬುದನ್ನು ಅಂತಿಮವಾಗಿ ನಿರ್ಧರಿಸಬೇಕಾದುದು ಅಫಘಾನ್ ಜನತೆ. ಇದು ಸೋವಿಯೆತ್ ಒಕ್ಕೂಟದ ನಿಲುವಾಗಿದೆ. ದೇಶದ ಆಂತರಿಕ ವ್ಯವಹಾರಗಳಲ್ಲಿ ಬಾಹ್ಯ ಅಸ್ತಕ್ಷೇಪ ನಿಲ್ಲಬೇಕು ಎಂಬುದು ಅಫಘಾನ್ ಜನತೆಯ ಒತ್ತಾಸೆಯಾಗಿದೆ,

ಅಫಘಾನಿಸ್ತಾನದ ಪರಿಸ್ಥಿತಿಗೆ ಸಂಬಂಧಿಸಿದಂತೆ ಸೋವಿಯೆತ್ ಒಕ್ಕೂಟದ ಹೊಸ ಉಪಕ್ರಮ ಸೋವಿಯೆತ್.ಅಮೆರಿಕಾ ಶೃಂಗ ಸಮಾವೇಶಕ್ಕೆ ಪರವಾಗಿರುವ ಅನೇಕ ಚಾಲಕ ಶಕ್ತಿಗಳಲ್ಲಿ ಒಂದು ಎಂದು ಸುದ್ದಿ ವಿಶ್ಲೇಷಕರು ಹೇಳುತ್ತಾರೆ. ಸೋವಿಯೆತ್ ನೇತಾರರ ಆಶಯಗಳ ಹಿಂದಿರುವ ಉದ್ದೇಶವನ್ನು ಇನ್ನಷ್ಟು ವಿಸ್ತೃತವಾಗಿ ಅಭಿವ್ಯಕ್ತಗೊಳಿಸಬಹುದು. ಈ ಆಶಯಗಳಲ್ಲಿ ಹೊಸ ರಾಜಕೀಯ ಚಿಂತನೆ ಕಾರ್ಯೋನ್ಮುಖವಾಗಿರುವುದನ್ನು ನಾವು ಕಾಣಬಹುದು. ಇಂದು ಹೊಸ ನಿಲುವು ಹೊಸ ಧೋರಣೆ ಅಪೇಕ್ಷಿಸದಿರುವ ಒಂದೇ ಒಂದು ಜ್ವಲಂತ ಸಮಸ್ಯೆಯೂ ಇಲ್ಲ. ಪ್ರತಿಯೊಂದು ಸಮಸ್ಯೆಯ ಇತ್ಯರ್ಥಕ್ಕೆ ಹೊಸ ನಿಲುವು ತಳೆಯುವ ಅಗತ್ಯವಿದೆ, ವಾಸ್ತವಿಕತೆಯ ಪ್ರಜ್ಞೆಯಿಂದ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕಾಗಿದೆ ಎಂದು ಮಿಖಾಯಿಲ್ ಗೋರ್ಬಚೆವ್ ಹಲವು ಬಾರಿ ಒತ್ತಿ ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಭೂಹೀನರ 'ವಿಧಾನಸೌಧ ಚಲೋ'

ಮಾರ್ಚ್ 29 ರಂದು ಮುಂಬೈ ನಗರ ಒಂದು ವಿಶಿಷ್ಟ ರೀತಿಯ ಬೃಹತ್ ಮತ ಪ್ರದರ್ಶನ ಕಂಡಿತು. ಸಿ. ಪಿ. ಐ. (ಎಂ), ಸಿ. ಪಿ. ಐ, ಆರ್, ಪಿ. ಐ., ಜನತಾ ಲಾಲ್‌ನಿಶಾನ್ ಹಾಗೂ ಶೋಷಿತ್ ಜನಾಂದೋಲನ್‌ಗಳಿರುವ ಭೂಹೀನ ಹಕ್ಕು ಸಂರಕ್ಷಣಾ ಸಮಿತಿ ಸಂಘಟಿಸಿದ ಈ ಮತ ಪ್ರದರ್ಶನದಲ್ಲಿ ರಾಜ್ಯದ ಎಲ್ಲಾ ಮೂಲೆಗಳಿಂದ 40 ಸಾವಿರ ಭೂ ಹೀನ ಕಾರ್ಮಿಕರು ಭಾಗವಹಿಸಿದ್ದರು. ಮುಂಬೈ ವಿಶ್ವವಿದ್ಯಾಲಯದ ಸಮೀಪದ ಮೈದಾನದಲ್ಲಿ ಬೃಹತ್ ಸಾರ್ವಜನಿಕರ ಸಭೆ ನಡೆಯುವ ಮೊದಲು ನಡೆದ 12 ಕಿ. ಮೀ ಉದ್ದದ ಮೆರವಣಿಗೆಗೆ ಎಲ್ಲಾ ಜಾತಿಯ ಭೂಹೀನರ ಐಕ್ಯತೆಯನ್ನು ಮಾತ್ರವಲ್ಲ, ಕೋಮುವಾದಿಗಳು ವಿರುದ್ಧ ಭೂಹೀನರ ಐಕ್ಯತೆಯನ್ನು ಪ್ರದರ್ಶಿಸಿತು, ಮೆರವಣಿಗೆ ಶಿವಸೇನೆಯ ಕಚೇರಿಯ ಮುಂದೆ ಹಾದು ಹೋಗುವಾಗ ಕೋಮುವಾದದ ವಿರುದ್ಧ ಕೇಳಿ ಬಂದ ಸಮರ ಧೀರ ಘೋಷಣೆಗಳು ಇದಕ್ಕೆ ನಿದರ್ಶನ. ಶಿವಸೇನೆ ಹಳ್ಳಿಗಳಿಗೆ ವ್ಯಾಪಿಸಲು ಪ್ರಯತ್ನಿಸುತ್ತಾ, ದಲಿತರ ವಿರುದ್ಧ ಪ್ರಚಾರ ಮಾಡುತ್ತಾ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳಿಗೆ ನೆರವಾಗಿ ಭೂಹೀನರ ಕೊಲೆ ಮಾಡಲು ಹೇಸದ ಹಿನ್ನೆಲೆಯಲ್ಲಿ ಇದು ಮಹತ್ವ ಪೂರ್ಣ.

(ಎರಡನೇ ಪುಟದಿಂದ)

ಸುತ್ತವೆ ಎಂದು ಅರ್ಥವಾಗುತ್ತವೆ.

ಈ ಉಪಗ್ರಹ ಕಾರ್ಯಕ್ರಮಕ್ಕೆ ಸುಮಾರು 200ಕೋಟಿ ರೂ. ವೆಚ್ಚವಾಗಿದ್ದು, ಇಂತಹುದೇ ಫ್ರೆಂಚ್ ಉಪಗ್ರಹದ ಸುಮಾರು 700ಕೋಟಿ ರೂ. ವೆಚ್ಚಕ್ಕೆ ಹೋಲಿಸಿದರೆ ಇದು ಬಹಳ ಅಗ್ಗ, ಬಹುರಾಷ್ಟ್ರೀಯ ವಿದೇಶಿ ತಂತ್ರಜ್ಞಾನದ ಭಕ್ತ ಶ್ರೀ ರಾಜೀವ ಗಾಂಧಿಯವರು ಇದರಿಂದ ಪಾಠ ಕಲಿತಾರೇ? ಅಥವಾ ಅವರಿಗೆ ದೇಶದ ದುಡಿಯುವ ಜನತೆ ಈ ಪಾಠ ಕಲಿಸ ಬೇಕಾದೀತೆ?

ಅಬುಜಿಹಾದ್ ಕೊಲೆ; ವಿಶ್ವಾದ್ಯಂತ ಖಂಡನೆ

ಅಬು ಜಿಹಾದ್ ಎಂದು ಜನಪ್ರಿಯರಾಗಿದ್ದ ಪ್ಯಾಲೆಸ್ಟೈನ್ ವಿಮೋಚನಾ ರಂಗದ ಒಬ್ಬ ಹಿರಿಯ ಮುಖಂಡ ಖಲೀಲ್ ಅಲ್–ವಜೀರ್ ರವರನ್ನು ಟ್ಯುನಿಸ್‌ನಲ್ಲಿ ಇಸ್ರೇಲಿ ಭಯೋತ್ಪಾದಕ ಪಡೆಯೊಂದು ಕೊಲೆ ಮಾಡಿರುವುದನ್ನು ವಿಶ್ವಾದ್ಯಂತ ಖಂಡಿಸಲಾಗಿದೆ. ಇಸ್ರೇಲಿ ಆಕ್ರಮಿತ ಜೋರ್ಡಾನ್ ನದಿಯ ಪಶ್ಚಿಮ ತಟ ಹಾಗೂ ಗಾಜಾ ಪಟ್ಟಿಯಲ್ಲಿ ಪ್ಯಾಲೆಸ್ಟೈನ್ ಜನತೆಯ ಧೀರ ಬಂಡಾಯದ ದ್ವೇಷ ತೀರಿಸಿಕೊಳ್ಳುವ ಒಂದು ಪ್ರಯತ್ನ ಇದು ಎಂಬುದರಲ್ಲಿ ಈಗ ಯಾವ ಸಂಶಯವೂ ಉಳಿದಿಲ್ಲ.

ಅಬು ಜಿಹಾದ್ ಕೊಲೆಯನ್ನು ಪ್ರತಿಭಟಿಸಿ ಅರಬ್ಬರು ಮತ್ತು ಪ್ಯಾಲೆಸ್ಟೈನರು ಬೃಹತ್ ಮತಪ್ರದರ್ಶನ ನಡೆಸಿದಾಗ ಅವರ ಮೇಲೆ ಗೋಳೀಬಾರು ಮಾಡಿ 12ಜನರನ್ನು ಅಮಾನುಷವಾಗಿ ಕೊಂದು ಇಸ್ರೇಲ್ ತನ್ನ ಬರ್ಬರತನವನ್ನು ಮತ್ತೆ ಪ್ರದರ್ಶಿಸಿತು. ಆದರೆ ಇಂತಹ ಯಾವ ಭಯೋತ್ಪಾದನೆಯಿಂದಲೂ ಆಕ್ರಮಿತ ಪ್ರದೇಶಗಳಲ್ಲಿನ ವಿಮೋಚನಾ ಹೋರಾಟಗಾರರನ್ನು ದಬಾಯಿಸುವುದು ಸಾಧ್ಯವಿಲ್ಲ ಎಂದು ಈ ಅಬು ಜಿಹಾದ್ ಮತ್ತು ನಂತರ 12 ಮಂದಿಯ ಕೊಲೆಯನ್ನು ಖಂಡಿಸಿರುವ ಸಿಪಿಐ (ಎಂ) ಪಾಲಿಟ್ ಬ್ಯೂರೋ ಏಪ್ರಿಲ್ 17ರಂದು ನೀಡಿದ ಹೇಳಿಕೆಯಲ್ಲಿ ತಿಳಿದಿದೆ, ಪಿ.ಎಲ್.ಓ. ಹೋರಾಟಗಾರರೊಂದಿಗೆ ಮತ್ತು ಪ್ಯಾಲೆಸ್ಟೈನ್ ಜನತೆಯ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಬೇಕೆಂದು ಅದು ಭಾರತೀಯ ಜನತೆಗೆ ಕರೆ ನೀಡಿದೆ.

ಕಳೆದ ನಾಲ್ಕು ತಿಂಗಳಿಂದ ಇಸ್ರೇಲ್ ವಿರುದ್ಧ ಪ್ಯಾಲೆಸ್ಟೈನ್ ಜನತೆ ನಡೆಸುತ್ತಿರುವ ಹೋರಾಟದಲ್ಲಿ ಇಸ್ರೇಲ್‌ನ ಕ್ರೂರ ಮುಖ ಜಗತ್ತಿನೆದುರು ಬಯಲಿಗೆ ಬಂದಿರುವುದು ಮಾತ್ರವೇ ಅಲ್ಲ, ಈ ಝಿಯೋನಿಸ್ಟ್ ಪ್ರಭುತ್ವಕ್ಕೆ ಅಪಾರ ಆರ್ಥಿಕ ಹಾನಿಯನ್ನೂ ಉಂಟುಮಾಡಿದೆ.

ಪಶ್ಚಿಮ ತಟ ಮತ್ತು ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಮಾಲಿಕರಿಗೆ ಅತ್ಯಂತ ಅಗ್ಗದ ಶ್ರಮ ಪೂರೈಸುತ್ತಿದ್ದ 1ಲಕ್ಷ 20ಸಾವಿರ ಪ್ಯಾಲೆಸ್ಟೈನ್ ಕಾರ್ಮಿಕರಲ್ಲಿ ಈಗ 10ಶೇಕಡಾದಷ್ಟು ಕೂಡಾ ಕೆಲಸಕ್ಕೆ ಹಾಜರಾಗುತ್ತಿಲ್ಲವಾದ್ದರಿಂದ ಇಸ್ರೇಲಿ ವ್ಯಾಪಾರಸ್ಥರು, ಉದ್ಯಮಿಗಳು ತೀವ್ರ ನಷ್ಟ ಎದುರಿಸಬೇಕಾಗಿ ಬಂದಿದೆ. ಕೆಲವಂತೂ ಮುಚ್ಚಿಯೇ ಹೋಗಿವೆ. ಪ್ಯಾಲೆಸ್ಟೈನರು ಇಸ್ರೇಲಿ ಉತ್ಪಾದನೆಗಳನ್ನು ಬಹಿಷ್ಕರಿಸುತ್ತಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯವಾಗಿಸಿದೆ, ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆಯೆಂದರೆ ಇಸ್ರೇಲ್ ಫಿಲಿಪೈನ್ಸ್ ಮತ್ತು ಯೂರೋಪಿನಲ್ಲಿ 14000 ಉದ್ಯೋಗಾವಕಾಶಕ್ಕಾಗಿ ಪ್ರಕಟಣೆ ಹೊರಡಿಸಿದೆ!

ಆಕ್ರಮಿತ ಪ್ರದೇಶಗಳಿಂದ ಇಸ್ರೇಲ್ ವಸೂಲು ಮಾಡುತ್ತಿದ್ದ 50ಕೋಟಿ ಡಾಲರ್ ತೆರಿಗೆ ಈ ವರ್ಷ 30 ಕೋಟಿಗೆ ಇಳಿಯಬಹುದೆಂದು ಅಂದಾಜು ಮಾಡಲಾಗಿದೆ. ಅರಬ್ ದೇಶಗಳೊಂದಿಗಿನ ವ್ಯಾಪಾರದಲ್ಲೂ 5ಕೋಟಿ ಡಾಲರ್ ನಷ್ಟ ಸಂಭವಿಸಲಿದೆ.

ಇದೂ ಸಾಲದೆಂಬಂತೆ ಆಕ್ರಮಿತ ಪ್ರದೇಶಗಳಿಗೆ ಬಂಡಾಯವನ್ನು ಹತ್ತಿಕ್ಕಲು 70 ಸಾವಿರ ಹೆಚ್ಚಿನ ಸೈನಿಕರನ್ನು ಕಳಿಸಿರುವ ಇಸ್ರೇಲ್ ಸರ್ಕಾರ ಈ ಬಾಬ್ತು ಪ್ರತಿದಿನ ಒಂದು ಕೋಟಿ ಡಾಲರ್ ಹೆಚ್ಚಾಗಿ ಖರ್ಚು ಮಾಡಬೇಕಾಗಿದೆಯೆಂದು ಇಸ್ರೇಲಿನ ಪತ್ರಿಕೆಯೊಂದು ಅಂದಾಜು ಮಾಡಿದೆ.

ಇವೆಲ್ಲಾ ಆಗಲೇ ಗಂಭೀರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಝಿಯೋನಿಸ್ಟ್ ಪ್ರಭುತ್ವದ ಮೇಲೆ, 26 ಶತಕೋಟಿ ಡಾಲರುಗಳ ವಿದೇಶೀ ಸಾಲದಿಂದ (ಇದು ಆ ದೇಶದ ಒಟ್ಟು ರಾಷ್ಟ್ರೀಯ ಉತ್ಪಾದನೆಗಿಂತಲೂ ಹೆಚ್ಚು!) ನರಳುತ್ತಿರುವ ದೇಶದ ಮೇಲೆ ಬಂದಿರುವ ಹೆಚ್ಚಿನ ಆರ್ಥಿಕ ಹೊರೆ.

ಆದರೂ ಪ್ಯಾಲೆಸ್ಟೈನ್‌ರ ನ್ಯಾಯಪೂರ್ಣ ವಿಮೋಚನಾ ಹೋರಾಟವನ್ನು ದಮನ ಮಾಡುವ ದುಸ್ಸಾಹಸವನ್ನು ಝಿಯೋನಿಸ್ಟರು ಮುಂದುವರಿಸುತ್ತಿದ್ದಾರೆ, ಕಾರಣ ಅವರಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಂದ ದೊರೆಯುತ್ತಿರುವ ಶ್ರೀರಕ್ಷೆ.

ಫಿಲಿಪ್ಪೈನ್ಸ್‌ನ ಜನವಾದೀ ರಂಗದ ಮುನ್ನಡೆ

1973ರಲ್ಲಿ ಸ್ಥಾಪಿಸಲ್ಪಟ್ಟ ಫಿಲಿಪ್ಪೈನ್ಸ್‌ನ ರಾಷ್ಟ್ರೀಯ ಜನವಾದೀ ರಂಗ (ಎನ್‌ಡಿಎಫ್) ಇದೇ ಏಪ್ರಿಲ್ 24ರಂದು ತನ್ನ 15ನೇ ವಾರ್ಷಿಕೋತ್ಸವವನ್ನು ಆಚರಿಸಿತು.

ಫಿಲಿಪೈನೋ ಜನತೆಯನ್ನು ಒಗ್ಗಟ್ಟಾಗಿಸಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಪ್ರತಿಗಾಮೀ ಆಳ್ವಿಕೆಯನ್ನು ಮತ್ತು ಅದರ ಸ್ಥಳೀಯ ಮಿತ್ರರನ್ನು ಪದಚ್ಯುತಗೊಳಿಸಿ ನೈಜ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಶಾಶ್ವತ ಶಾಂತಿಗಾಗಿ ಜನತೆಯ ಹೋರಾಟಗಳನ್ನು ನಡೆಸುವ ಗುರಿ ಇಟ್ಟುಕೊಂಡಿರುವ ಈ ರಂಗದಲ್ಲಿ ಫಿಲಿಪ್ಪೈನ್ಸ್ ಕಮ್ಯುನಿಸ್ಟ್ ಪಕ್ಷ ಮತ್ತು ನವ ಜನತಾ ಸೇನೆಯೂ ಸೇರಿದಂತೆ 14ಪ್ರಮುಖ ಸಂಘಟನೆಗಳಿವೆ. ಈ ರಂಗದ ಸದಸ್ಯರು-ಎಲ್ಲಾ ಜೀವನ ರಂಗಗಳಲ್ಲಿಯೂ ದುಡಿಯುತ್ತಿದ್ದು ಫಿಲಿಪ್ಪೈನ್ಸ್‌ನ 73 ಪ್ರಾಂತ್ಯಗಳಲ್ಲಿ 69ರಲ್ಲಿ ಅವರು ಸಕ್ರಿಯರಾಗಿದ್ದಾರೆ,

ಪೋರ್ಚುಗಲ್‌ನಲ್ಲಿ 10 ಲಕ್ಷ ಜನರ ಮುಷ್ಕರ

ಇದೇ ಮಾರ್ಚ್ 28ರಂದು ಪೋರ್ಚುಗಲ್‌ನ 10ಲಕ್ಷ ಕಾರ್ಮಿಕರು 24 ಗಂಟೆಗಳ ಮುಷ್ಕರ ನಡೆಸಿದರು. ಮಾಲಿಕರಿಗೆ ಕಾರ್ಮಿಕರನ್ನು ವಜಾ ಮಾಡುವುದನ್ನು ಸುಲಭಗೊಳಿಸುವ ಸರ್ಕಾರದ ಕರಡು ಶಾಸನವನ್ನು ವಿರೋಧಿಸಿ ನಡೆದ ಈ ದೇಶವ್ಯಾಪೀ ಮುಷ್ಕರದಲ್ಲಿ ಸಾರಿಗೆ, ಸಂಪರ್ಕ, ವಿಮಾನಯಾನ, ಬಟ್ಟೆಗಿರಣಿ, ಹಡಗುಕಟ್ಟೆ ಮತ್ತು ಲೋಹ ಕೈಗಾರಿಕೆಯ ಕಾರ್ಮಿಕರು ಭಾಗವಹಿಸಿದರು.

ಜಪಾನೀ ರೈತರ ಅಮೇರಿಕಾ ವಿರೋಧಿ ಪ್ರತಿಭಟನೆ

ಕಳೆದ ವಾರಾಂತ್ಯದಲ್ಲಿ ಜಪಾನೀ ರೈತರು ಒಂದು ಅಮೇರಿಕನ್ ಕಾರನ್ನು ಸಾರ್ವಜನಿಕವಾಗಿ ನುಜ್ಜು-ಗುಜ್ಜು ಮಾಡಿ ಅಮೆರಿಕಾದಿಂದ ಆಮದಾದ ಅಕ್ಕಿ, ಕಿತ್ತಳೆ, ದ್ರಾಕ್ಷೆ ಹಾಗೂ ನಿಂಬೆಹಣ್ಣುಗಳ ರಾಶಿ ಜೊತೆಗೆ ಸುಟ್ಟು ಜಪಾನೀ ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ತನ್ನ ದಾಳಿಗೆ "ಮುಕ್ತ"ಗೊಳಿಸಬೇಕೆಂಬ ಅಮೆರಿಕನ್ ಒತ್ತಡ ತಂತ್ರಗಳಿಗೆ ತೀವ್ರಪ್ರತಿಭಟನೆ ವ್ಯಕ್ತಪಡಿಸಿದರು. ಜಪಾನೀ ಆಳುವ ಪಕ್ಷದಮೇಲೆ ಅಗಾಧ ಪ್ರಭಾವಹೊಂದಿರುವ ದೇಶವ್ಯಾಪೀ ಕೃಷಿ ಸಹಕಾರ ಸಂಘಟನೆಯ ಸದಸ್ಯರು ಈ ರೈತರು ಎನ್ನಲಾಗಿದೆ. ಸರ್ಕಾರ ಅಮೇರಿಕನ್ ಒತ್ತಡಗಳಿಗೆ ಶರಣಾದರೆ ತಾವು ವಿರೋಧ ಪಕ್ಷಗಳಿಗೆ ಸಮರ್ಥನೆ ನೀಡುವುದಾಗಿ ಈ ಸಂಘಟನೆ ಕೂಡಾ ಒಂದು ಠರಾವನ್ನು ಇತ್ತೀಚೆಗೆ ಅಂಗೀಕರಿಸಿದೆ.

ತ್ರಿಪುರಾ ಭಯೋತ್ಪಾದಕ ಸರ್ಕಾರದ ಎರಡು ತಿಂಗಳು

ಒಂದೆಡೆ ಎಲ್ಲಾ ಚುನಾಯಿತ ಪ್ರಜಾಸತ್ತಾತ್ಮಕ ಸಂಸ್ಥೆಗಳಾದ ಮುನಿಸಿಪಾಲಿಟಿ, ಪಂಚಾಯತ್ ಮುಂತಾದವುಗಳನ್ನು ವಿಸರ್ಜಿಸಿ ಅಧಿಕಾರಶಾಹಿಗಳು ಮತ್ತು ಕಾಂಗ್ರೆಸ್ (ಐ) ಚೇಲಾಗಳಿಗೆ ಅದನ್ನು ವಹಿಸಿಕೊಡುವುದು, "ಕಮ್ಯುನಿಸಂನ ಭೂತೋಚ್ಚಾಟನೆ"ಗೆ ತೀವ್ರ ಅಮಾನುಷ ಸರ್ಕಾರೀ ಭಯೋತ್ಪಾದನೆ, ಆದಿವಾಸಿ ಪ್ರದೇಶಗಳಲ್ಲಿ ಸೇನೆಯ ದಾಳಿ, ಎನ್.ಎಸ್.ಎ. ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರ, ಎಡರಂಗ ಸಮರ್ಥಕರ ಸಾಮೂಹಿಕ ಬಂಧನ, ಸರ್ಕಾರೀ ನೌಕರರ ಮೇಲೆ ಕೈಮಾಡುವುದು-ಮಂತ್ರಿಗಳೂ ಸೇರಿದಂತೆ.

ಇನ್ನೊಂದೆಡೆ ಶ್ರೀಮಂತರ ಖಜಾನೆ ತುಂಬಿಸಲು ಸಾಲಮೇಳ, ಸ್ಥಳೀಯ ಪುಸ್ತಕ ವ್ಯಾಪಾರಿಗಳ ಲಾಭ ಹೆಚ್ಚಿಸಲು ಪುಸ್ತಕ ಮೇಳ, ಮಂತ್ರಿಗಳ ಬಂಗಲೆಗಳನ್ನು "ನವೀಕರಿಸಲು", ಈ ಮಂತ್ರಿ ಎಂ.ಎಲ್.ಎ.ಗಳಿಗಾಗಿ ಕಾರುಗಳ ಖರೀದಿಗಾಗಿ ರಾಜ್ಯದ ಖಜಾನೆಯಿಂದ ಲಕ್ಷಾಂತರ ರೂಪಾಯಿಗಳ ಲೂಟಿ, ಜನಸಾಮಾನ್ಯರಿಗೆ ಪರಿಹಾರ ನೀಡುತ್ತಿದ್ದ ಹಲವಾರು ಯೋಜನೆಗಳ ಪದ್ದತಿ, ಇವೆಲ್ಲಕ್ಕೂ ಮುಕುಟವಿಟ್ಟಂತೆ ಪ್ರಧಾನಮಂತ್ರಿಗಳ ಎರಡು ಗಂಟೆಗಳ ತುರ್ತು ಭೇಟಿಯ ಮೂಲಕ ಇವೆಲ್ಲವನ್ನೂ ಅನೂಚಾನವಾಗಿ ಮುಂದುವರಿಸಿಕೊಂಡು ಹೋಗಲು ದೆಹಲಿ ಪ್ರಭುಗಳ ಆಶೀರ್ವಾದ.

ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ಮೋಸದಿಂದ ಅಧಿಕಾರ ಕಸಿದುಕೊಂಡ 60 ದಿನಗಳ ನಂತರದ ಚಿತ್ರವಿದು. 1972_77ರ ಪಶ್ಚಿಮ ಬಂಗಾಳವನ್ನು ನೆನಪಿಸುವ ಚಿತ್ರವಿದು.

ಸಿ.ಪಿ.ಐ. (ಎಂ)ನ ಸಬ್ರೂಮ್ ಜಿಲ್ಲಾ ಸಮಿತಿಯ ಸದಸ್ಯರೂ ತ್ರಿಪುರಾ ರಾಜ್ಯ ಉಪಜಾತಿ ಗಣಮುಕ್ತಿ ಪರಿಷತ್‌ನ ಕೇಂದ್ರ ಸಮಿತಿಯ ಸದಸ್ಯರೂ ಆದ ಮಲಯ್ ದೀವಾನರ ಮೇಲೆ ಸೇನಾಧಿಕಾರಿಯೊಬ್ಬನಿಂದ ಚಿತ್ರಹಿಂಸೆ ಒಂದು ಇತ್ತೀಚಿನ ನಿದರ್ಶನ.

ಸಬ್ರೂಮ್‌ನಿಂದ 15 ಕಿ.ಮೀ. ದೂರದಲ್ಲಿರುವ ಮನು ಬಂಕುಲ್ ಸೇನಾ ಶಿಬಿರದ ಸೈನಿಕರು ಮಾರ್ಚ್ 30ರಂದು ಮಲಯ್ ದೀವಾನ್‌ರನ್ನು ಬಂಧಿಸಿ ತಮ್ಮ ಶಿಬಿರಕ್ಕೆ ಕರೆದೊಯ್ದರು. ಸಿ.ಪಿ.ಐ. (ಎಂ) ಸದಸ್ಯರು ಕಾನೂನು ಬಾಹಿರವಾಗಿ ಶಸ್ತ್ರಾಸ್ತ್ರ ಹೊಂದಿದ್ದಾರೆ, ಅದನ್ನು ಒಪ್ಪಿಸಬೇಕೆಂದು ಅವರಿಗೆ ಅಲ್ಲಿ ಹೇಳಲಾಯಿತು. ಮಲಯ್ ದೀವಾನ್ ಅದು ಸುಳ್ಳೆಂದು ನಿರಾಕರಿಸಿದರು. ಮರುದಿನ ಅವರನ್ನು ಸಬ್ರೂಮ್ ಸೇನಾ ಶಿಬಿರಕ್ಕೆ ಕೊಂಡೊಯ್ದು ಮೇಜರ್ ಥಾಪಾ ಎಂಬುವರ ಮುಂದೆ ನಿಲ್ಲಿಸಲಾಯಿತು. ಅತ್ಯಂತ ಒರಟಾಗಿ ವರ್ತಿಸುತ್ತಿದ್ದ ಈ ಸೇನಾಧಿಕಾರಿ ಕಾನೂನು ಬಾಹಿರ ಶಸ್ತ್ರಾಸ್ತ್ರಗಳನ್ನು ಒಪ್ಪಿಸದಿದ್ದರೆ ಅವರನ್ನು ಕೊಲ್ಲುವುದಾಗಿ ಬೆದರಿಸಿದ. ಶಸ್ತ್ರಾಸ್ತ್ರ ಹೊಂದಿರುವುದನ್ನು ಮತ್ತೆ ಮತ್ತೆ ಕಾಂ॥ ದೀವಾನ್ ನಿರಾಕರಿಸಿದಾಗ ಅವರನ್ನು ವಿವಸ್ತ್ರಗೊಳಿಸಿ, ಕೈಕಾಲು ಕಟ್ಟಿ ತಲೆಕೆಳಗಾಗಿ ಒಂದು ಗಂಟೆಗಳ ಕಾಲ ನೇತು ಹಾಕಲಾಯಿತು. ಇದರಿಂದಲೂ ತೃಪ್ತನಾಗದ ಮೇಜರ್ ಥಾಪಾ ನಂತರ 40 ನಿಮಿಷಗಳು ಬಿಸಿಲಿನಲ್ಲಿ ಇದೇ ರೀತಿ ನಿಲ್ಲಿಸಲಾಯಿತು, ಕಾಂ॥ ದೀವಾನ್ ಪ್ರಜ್ಞಾಹೀನರಾದಾಗ ಕಬ್ಬಿಣದ ಸಲಾಕೆಯಿಂದ ಹೊಡೆಯಲಾಯಿತು. ಕೊನೆಗೆ ಏಪ್ರಿಲ್ 14 ರಂದು ಮತ್ತೆ ಮನು ಬಂಕುಲ್ ಶಿಬಿರಕ್ಕೆ ಬಂದು ಶಸ್ತ್ರಾಸ್ತ್ರ ಹೊಂದಿರುವವರ ಪಟ್ಟಿ ನೀಡಬೇಕೆಂಬ ಶರತ್ತಿನ ಮೇಲೆ ಬಿಡುಗಡೆ ಮಾಡಲಾಯಿತು.

ತ್ರಿಪುರಾ ಕಾಂಗ್ರೆಸ್ (ಐ) ಸರ್ಕಾರದ 17 ಮಂತ್ರಿಗಳಲ್ಲಿ ಹತ್ತು ಮಂತ್ರಿಗಳು ಪೊಲೀಸರಿಗೆ "ಬೇಕಾದ" ಸಮಾಜ ವಿರೋಧೀ ಕುಕೃತ್ಯಗಳ ದಾಖಲೆ ಪಡೆದ ವ್ಯಕ್ತಿಗಳು, ಅವರಲ್ಲೊಬ್ಬ, ಬಿಲಾಲ್ ಮಿಯಾ ಎಂಬಾತ ತನ್ನ ಶೈಕ್ಷಣಿಕ ಜೀವನಾದ್ಯಂತ ಸರ್ಟಿಫಿಕೇಟ್‌ಗಳನ್ನು ಫೋರ್ಜರಿ ಮಾಡಿದ ದಾಖಲೆ ಪಡೆದಾತ. ಇನ್ನೊಬ್ಬಾಕೆ ಮಹಾರಾಣಿ ಬಿಬು ಕುಮಾರಿದೇವಿ ಮಂತ್ರಿಪದವಿಯ ಪ್ರತಿಜ್ಞೆ ಸ್ವೀಕರಿಸಿದ ಒಂದು ತಿಂಗಳ ಮೇಲೆ ಮೊದಲ ಬಾರಿ ತನ್ನ ಕಛೇರಿಗೆ ಹಾಜರಾದಳು!

ಇದು ತ್ರಿಪುರಾ ಕಾಂಗ್ರೆಸ್ (ಐ)ನ ಮೊದಲ ಅರವತ್ತು ದಿನಗಳ ನಾಚಿಕೆಗೆಟ್ಟ ಆಳ್ವಿಕೆಯ ದಾಖಲೆ.

ತ್ರಿಪುರಾದ ಜನತೆ ಈ ದುರಾಡಳಿತವನ್ನು ನೋಡುತ್ತಾ ತೆಪ್ಪಗೆ ಕುಳಿತಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಅವರು ತಾವು ಕಷ್ಟಪಟ್ಟು ಪಡೆದುಕೊಂಡ ಹಕ್ಕುಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಪ್ರತಿಭಟನಾ ಪ್ರದರ್ಶನಗಳು, ಸಭೆಗಳು, ಸಮಾವೇಶಗಳು, ಬಹಿರಂಗ ಸಭೆಗಳು ಪ್ರತಿದಿನ ಜನತೆಯ ಅಸಂತೃಪ್ತಿಗೆ ದನಿ ನೀಡುತ್ತಿವೆ.

KRNW/BGS-312 MAG (2) PRB DECR 319/-78-79

ಕಾಂಗ್ರೆಸ್ ಅಧಿವೇಶನದ ಬಗ್ಗೆ ಪಿ. ಬಿ.

ಇತ್ತೀಚೆಗೆ ಮದ್ರಾಸ್‌ನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಬಗ್ಗೆ ಪಿ.ಬಿ. ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಈ ಅಧಿವೇಶನ ಅನೇಕ ಬರಿಮಾತಿನ ಘೋಷಣೆಗಳನ್ನಷ್ಟೇ ನೀಡಿ ತನ್ನ ಎಂದಿನ ಜನವಿರೋಧಿ ನೀತಿಯನ್ನೇ ಮುಂದುವರಿಸುತ್ತಿದೆ ಎಂದಿದೆ. ಭಾರತದ ಜನತೆಯನ್ನು ತೀವ್ರ ತೊಂದರೆಗೆ ಗುರಿ ಮಾಡಿರುವ ವಿನಾಶಕಾರಿ ಆರ್ಥಿಕ ನೀತಿಯನ್ನು ಮುಂದುವರಿಸುವ ಘೋಷಣೆ ಮಾಡಿದೆ. ಸಾರ್ವಜನಿಕ ವಲಯವನ್ನು ಉಳಿಸುತ್ತೇವೆಂಬ ಆಷಾಢಭೂತಿ ಮಾತುಗಳನ್ನುದುರಿಸುತ್ತಲೇ ರಾಜೀವ ಗಾಂಧಿಯವರು ಉದಾರ ಆರ್ಥಿಕ ನೀತಿಯನ್ನು ಮುಂದುವರಿಸುತ್ತೇವೆಂಬುದನ್ನು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಮೂರೂವರೆ ವರ್ಷಗಳ ರಾಜೀವ್ ಆಡಳಿತದ ದಾಖಲೆ ಗುತ್ತೇದಾರಿ ಬಂಡವಾಳ ಶಾಹಿಗಳು ಹಿಂದೆಂದೂ ಇಲ್ಲದಷ್ಟು ಸುಖವಾಗಿ ಬೆಳೆಯುತ್ತಿದ್ದಾರೆಂಬುದನ್ನು ಎತ್ತಿ ತೋರಿಸುತ್ತದೆ. ಅಮೇರಿಕನ್ ಬಹುರಾಷ್ಟ್ರೀಯ ಹಾಗೂ ವಿದೇಶಿ ಬಂಡವಾಳ ಹೆಚ್ಚೆಚ್ಚು ಒಳನುಗ್ಗುತ್ತಿವೆ. ಉದಾರ ಆಮದು ನೀತಿ ಭಾರತೀಯ ಕೈಗಾರಿಕೆಯ ಹಲವು ವಿಭಾಗಗಳ ಅಸ್ತಿತ್ವಕ್ಕೆ ಅಪಾಯವನ್ನೊಡ್ಡಿದೆ. ಇಷ್ಟೇ ಅಲ್ಲದೆ ಕೃಷಿ ಉತ್ಪಾದನೆಗಳಾದ ರಬ್ಬರ್, ಕೊಬ್ಬರಿ, ಇತ್ಯಾದಿಗಳಿಗೆ ಸಂಬಂಧಿಸಿ ಗೊತ್ತು ಗುರಿಯಿಲ್ಲದ ಆಮದು ಉದಾರೀಕರಣ ಲಕ್ಷಾಂತರ ರೈತರನ್ನು ಹಾಗೂ ಸಣ್ಣ ಉತ್ಪಾದಕರನ್ನು ನಾಶ ಮಾಡುತ್ತಿದೆ. ಸ್ವಾವಲಂಬನೆಗೆ ಬದ್ಧವಾದ ನೀತಿಯನ್ನು ಈಗ ಕೈಬಿಡಲಾಗಿದೆ.

ದೇಶದ ಐಕ್ಯತೆ

ದೇಶದ ಐಕ್ಯತೆಯ ಬಗ್ಗೆ ಎ.ಐ.ಸಿ.ಸಿ. ನಿರ್ಣಯ ದೊಡ್ಡದಾಗಿ ಕೊಚ್ಚಿಕೊಳ್ಳುತ್ತದೆ. ಆದರೆ ಕೋಮುವಾದಿ ಹಾಗೂ ಛಿದ್ರಕಾರಿ ಶಕ್ತಿಗಳನ್ನು ಮೆಚ್ಚಿಸುವ ನೀತಿ ರಾಜೀವ್ ಸರ್ಕಾರದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದೆ. ಖಲಿಸ್ತಾನದ ಪ್ರತಿಪಾದನೆ ಮಾಡುವ "ಜಗದ್ಗುರು"ಗಳನ್ನು ಬಿಡುಗಡೆ ಮಾಡಿ ಅವರೊಂದಿಗೆ ನೇರವಾಗಿ ವ್ಯವಹಾರ ಮಾಡಿ ಅವರಿಗೆ ಕಾನೂನು ಬದ್ಧತೆಯನ್ನು ಕಲ್ಪಿಸಿಕೊಟ್ಟಿದೆ ಈ ಸರ್ಕಾರ. ಇದರೊಡನೆ ಕೇರಳ, ತ್ರಿಪುರಾಗಳಲ್ಲಿ ಕೋಮುವಾದಿಗಳು, ಛಿದ್ರಕಾರಿಗಳೊಡನೆ ಮೈತ್ರಿ ಬೆಳೆಸಿರುವ ಈ ಪಕ್ಷ ವಿರೋಧ ಪಕ್ಷಗಳನ್ನು ರಾಷ್ಟ್ರ ವಿರೋಧಿಗಳು ಹಾಗೂ ಛಿದ್ರಕಾರಿಗಳ ಬೆಂಬಲಿಗರೆಂದು ಮುದ್ರೆಯೊತ್ತಲೆಳಸುತ್ತಿದೆ.

ಪ್ರಧಾನಮಂತ್ರಿಯವರು ತಮ್ಮ ಆಡಳಿತದ ತೂತುಗಳನ್ನು ಮುಚ್ಚಲು ಕಮ್ಯುನಿಸ್ಟರ ಹಾಗೂ ಎಡಪಕ್ಷಗಳ ಬಗ್ಗೆ ಮಾಮೂಲಿ ಮಾದರಿಯಲ್ಲಿ ಧಾಳಿಯೆಸಗಿದ್ದಾರೆ. ಹೆಚ್ಚುತ್ತಿರುವ ಜನ ಸಮುದಾಯದ ಪ್ರತಿಭಟನೆಯನ್ನು ಹಾಗು ಇದರಲ್ಲಿ ಎಡಶಕ್ತಿಗಳ ನಾಯಕ ಪಾತ್ರವನ್ನು ಎದುರಿಸಬೇಕಾಗಿರುವ ಕಾಂಗ್ರೆಸ್ ಎಡ ಹಾಗೂ ಬಲ ಪಂಥೀಯರ ನಡುವೆ ಒಳಸಂಚು ಎಂಬ ಧೂಳೆಬ್ಬಿಸಲು ವಿಫಲ ಪ್ರಯತ್ನ ನಡೆಸಿದೆ.

ಕೇವಲ ಚುನಾವಣೆಗಾಗಿ ಬಡತನ ಮತ್ತು ನಿರುದ್ಯೋಗವನ್ನು ನಿವಾರಿಸುವ ಬರುಗು ಘೋಷಣೆಗಳ ಹೊರತಾಗಿ ಈ ಅಧಿವೇಶನದಲ್ಲಿ ಬೇರೇನೂ ಇಲ್ಲ, ಜನ ತಮ್ಮ ಸಮಸ್ಯೆಗಳನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡುವ ನೀತಿಗಳನ್ನು, ಕಾಂಗ್ರೆ ಪ್ರಜಾಸತ್ತೆಯ ಮೇಲೆ ಎಸಗುವ ಧಾಳಿಯನ್ನು ಮತ್ತಷ್ಟು ಎದುರು ನೋಡಬೇಕಾಗುತ್ತದೆ.

ರಾಜ್ಯಗಳಿಗೆ ಸ್ವಾಯತ್ತತೆಯನ್ನು ಕೊಡುವುದರ ನಿರಾಕರಣೆಗೆ ಹಾಗೂ ಕೇಂದ್ರ ಸರ್ಕಾರಕ್ಕಿರುವ ಏಕ ಛತ್ರಾಧಿಪತಿಯ ಅಧಿಕಾರವನ್ನು ಮತ್ತಷ್ಟು ಬಲಗೊಳಿಸಿಕೊಳ್ಳುವುದನ್ನು ದೇಶದ ಜನ ಎದುರು ನೋಡಬೇಕಾಗಿದೆ. ಏಕೆಂದರೆ ಇಡೀ ನಿರ್ಣಯದಲ್ಲಿ ಎಲ್ಲೂ ಸರ್ಕಾರಿಯ ಕಮಿಷನ್ ವರದಿಯ ಬಗ್ಗೆ ಉಲ್ಲೇಖವೇ ಇಲ್ಲ.

ಅಷ್ಟೇ ಅಲ್ಲ ವಿರೋಧಪಕ್ಷಗಳ ಜೊತೆ ತನ್ನ ಪ್ರಜಾಪ್ರಭುತ್ವ ವಿರೋಧೀ ಠೇಂಕಾರದ ಕನ್ನಡಿಯೆಂಬಂತೆ ಎ.ಐ.ಸಿ.ಸಿ. ಅಧಿವೇಶನ, ಕಾಂಗ್ರೆಸ್ಸಿನೊಳಗೆ ಸಂಘಟನಾತ್ಮಕ ಚುನಾವಣೆಗಳನ್ನು ನಡೆಸುವ ಬಗ್ಗೆ ಯಾವುದೇ ಭರವಸೆ ನೀಡಿಲ್ಲ.

ಎನ್.ಎಲ್. ಸಹಾಯನಿಧಿ

ಮೈಸೂರು ಕಿರ್ಲೋಸ್ಕರ್–
ಎಂಪ್ಲಾಯಿಸ್ ಯೂನಿಯನ್,
ಹರಿಹರ,
ರೂ.1,000

ತಿದ್ದುಪಡಿ:

ಏಪ್ರಿಲ್ 17ರ ಸಂಚಿಕೆಯಲ್ಲಿ ಪ್ರಕಟವಾದ ತ್ರಿಪುರಾ ಸಹಾಯಧಿಗೆ ಶಂಕರನಾರಾಯಣ (ಪಾವಗಡ)ರ ಸಹಾಯ ಸಾವಿರ ರೂ. ಎಂದು ತಪ್ಪಾಗಿ ಮುದ್ರಣಗೊಂಡಿದೆ ಅದನ್ನು 100ರೂ. ಎಂದು ಈ ಮೂಲಕ ತಿದ್ದುಪಡಿ ಮಾಡುತ್ತಿದ್ದೇವೆ.

(1ನೇ ಪುಟದಿಂದ)

ಯಲು ಉಪಯೋಗಿಸಲಾಗುತ್ತಿದೆ. ಸಾವಿರಾರು ಜನರನ್ನು ಸುಳ್ಳು ಕೇಸು ದಾಖಲುಗಳಲ್ಲಿ ತೊಡಗಿಸಿದ್ದರೆ ನೂರಾರು ಜನರನ್ನು ಬಂಧಿಸಿ ಹಿಂಸೆ ಮಾಡಲಾಗುತ್ತಿದೆ.

ಗಿರಿಜನರನ್ನು ಮಹಿಳೆಯರನ್ನು ಈ ಹಿಂಸೆಗಳಿಗೆ, ದೈಹಿಕ ಆಘಾತಕ್ಕೆ ಗುರಿ ಮಾಡಲಾಗಿದೆ.

ಫಾತಿಕ್ರೇಯರ್ ಉಪ ಚುನಾವಣೆಯಂತೂ, ಕಾಂಗ್ರೆಸ್ (ಐ) ಬೆಂಬಲಿಗರ ಹಿಂಸೆ, ದಮನಗಳಿಂದ ಒಂದು ಅಣಕು ಪ್ರಹಸನವಾಗಿ ಪರಿವರ್ತಿತವಾಯಿತು.

ಪ. ಬಂಗಾಳದಲ್ಲಿ

ಪ. ಬಂಗಾಳದಲ್ಲಿ ಹಿಂದಿನ ತಿಂಗಳು ಪಂಚಾಯತ್ ಚುನಾವಣೆಗಳಲ್ಲಿ ಸೋತ ಕಾಂಗ್ರೆಸ್ ವಿಚ್ಛಿದ್ರಕಾರಿಯಾಗಿ ಎಲ್ಲದರಲ್ಲಿಯೂ ಕಾಳಗಕ್ಕಿಳಿಯುವ ಮನೋಭಾವದಿಂದ ವರ್ತಿಸುತ್ತಿದೆ. ಇದು ಈ ಪಕ್ಷದ ಪ್ರಜಸತ್ತಾ ವಿರೋಧಿ ಗುಣವನ್ನು ಸಾಬೀತು ಪಡಿಸುತ್ತಿದೆ. ವಿಧಾನ ಸಭೆಯೊಳಗೆ ಕಾಂಗ್ರೆಸ್ ಶಾಸಕರು ಮತ್ತೆ ಮತ್ತೆ ಸಭೆ ನಡವಳಿಕೆಯನ್ನು ಭಂಗಪಡಿಸಲು ಯತ್ನಿಸಿದರೆ ಅವರ ಬೆಂಬಲಿಗರು ಆಚೆಯಿಂದ ಸಭಾಆವರಣದೊಳಕ್ಕೆ ಬಾಂಬ್‌ಗಳನ್ನು ಎಸೆಯುತ್ತಿದ್ದಾರೆ. ಕಾಂಗ್ರೆಸ್ ರಾಜ್ಯ ಅಧ್ಯಕ್ಷ ದಾಸ್‌ಮುನ್ಷಿ "ಗೆರಿಲ್ಲಾ ಯುದ್ಧ"ಕ್ಕೆ ಕರೆ ಕೊಡುತ್ತಾರೆ. ಕೇಂದ್ರದ ಮಧ್ಯ ಪ್ರವೇಶದ ಬೆದರಿಕೆಯೊಡ್ಡುತ್ತಿದ್ದಾರೆ. ಅರಾಜಕತೆಯನ್ನು ಸೃಷ್ಟಿಸಲು ಕಾಂಗ್ರೆಸ್ ಬೆಂಬಲಿಗರಿಗೆ ಬಹಿರಂಗ ಕರೆ ನೀಡುತ್ತಿದ್ದಾರೆ.

ಇಂತಹ ಬೆದರಿಕೆಗಳನ್ನು ಕೈ ಬಿಡುವಂತೆ ಪಿ. ಬಿ. ಆಡಳಿತ ಪಕ್ಷಕ್ಕೆ ಎಚ್ಚರಿಕೆ ನೀಡುತ್ತಾ ಜನರ ಭದ್ರವಾದ ಬೆಂಬಲದ ಬುನಾದಿಯ ಮೇಲೆ ನಿಂತಿರುವ ಎಡರಂಗ ಸರ್ಕಾರ ಇದಕ್ಕೆ ಮಣಿಯುವುದಿಲ್ಲವೆಂದು ಘೋಷಿಸಿದೆ.

ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿಗಳ ಬೆಂಬಲದೊಂದಿಗೆ ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಅಪಾಯವನ್ನೊಡ್ಡಿರುವ ಸಂದರ್ಭದಲ್ಲಿ ದೇಶದ ಜನತೆಯ ಮೇಲೆ ಹೇರಿದ ಸಂವಿಧಾನದ 59ನೇ ತಿದ್ದುಪಡಿ, ಸಂಸದೀಯ ಪ್ರಜಾಪ್ರಭುತ್ವದ ನಾಗರಿಕ ಸ್ವಾತಂತ್ರ್ಯಗಳ ಮೇಲೆ, ಎಸಗುತ್ತಿರುವ ತೀವ್ರ ಧಾಳಿಗಳು ದೇಶಕ್ಕೆ ಒದಗಲಿರುವ ತೀವ್ರ ಅಪಾಯದ ಮುನ್ಸೂಚನೆಯಾಗಿದೆ.

(1ನೇ ಪುಟದಿಂದ)

ಅಧಿಕಾರ ಕಳೆಕೊಳ್ಳದಿರಲು ಮತ್ತು ಆದಷ್ಟು ಹೆಚ್ಚು ರಾಜ್ಯಗಳನ್ನು ತಮ್ಮ ಕೈ ಅಡಿಯಲ್ಲಿ ಇಟ್ಟುಕೊಳ್ಳಲು ಕಾಂಗ್ರೆಸ್ (ಐ) ಈ ನೀತಿಯನ್ನು ಅನುಸರಿಸುತ್ತಿವೆ. ಕಾಂಗ್ರೆಸ್ (ಐ) ಪಕ್ಷವು ಆಂತರಿಕ ಒಳಜಗಳಗಳಿಗೆ ಹೆಸರುವಾಸಿಯಾಗಿದೆ. ಇತ್ತೀಚೆಗೆ ಹಲವು ರಾಜ್ಯಗಳ ಮುಖ್ಯಮಂತ್ರಿಗಳನ್ನು ಮಧ್ಯರಾತ್ರಿಯಲ್ಲಿ ಆಯಾ ಶಾಸಕರನ್ನೂ ಸಹ ಕೇಳದೆ ಬದಲಾಯಿಸಿದ್ದಾರೆ. ಆದ್ದರಿಂದ ಎಲ್ಲಾ ಭೂಮಾಲಿಕ ಬಂಡವಾಳಶಾಹಿ ಪಕ್ಷಗಳಿಗೆ ಆಂತರಿಕ ಒಳಜಗಳಗಳು ಸಹಜವಾಗಿರುತ್ತವೆ ಎಂದು ನಾವು ಗಮನಿಸಬಹುದು, ಅಂದಿನ ಚಾರಿತ್ರಿಕ ಕಾರಣಗಳಿಂದಾಗಿ ಪ್ರಜಾಪ್ರಭುತ್ವದ ಪರವಾಗಿ ನಿಲ್ಲಬೇಕಾದಿ ಬಂದ ಜನತಾ ಪಕ್ಷವು ಇಂದು ತನ್ನ ಆಂತರಿಕ ಒಳಜಗಳಗಳನ್ನು ಕೊನೆಗೊಳಿಸಲು ಸಾಧ್ಯವಾಗಬೇಕಾದರೆ ಅದು ತನ್ನ ಪ್ರಜಾಪ್ರಭುತ್ವವಾಗಿ ನಿಲುವಿಗೆ ಹೆಚ್ಚೆಚ್ಚು ಬದ್ಧವಾಗುವ ಮೂಲಕ ರಾಷ್ಟ್ರದ ಪ್ರಸ್ತುತ ಅವಶ್ಯಕತೆಯಾಗಿ ಮೂಡಿಬಂದಿರುವ ಎಡ ಮತ್ತು ಜಾತ್ಯಾತೀತ ಪರ್ಯಾಯಕ್ಕಾಗಿ ಶ್ರಮಿಸಬೇಕು.

ಕಾಂಗ್ರೆಸ್ (ಐ)ನ ಕುತಂತ್ರಗಳ ಬಗ್ಗೆ ಎಚ್ಚರಿಕೆಯಿಂದಿರಲು ರಾಜ್ಯದ ಜನತೆಗೆ ಕರೆ ನೀಡಿರುವ ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಕಾಂಗ್ರೆಸ್ (ಐ) ಅಧಿಕಾರದಲ್ಲಿದ್ದಾಗ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಕಾರ್ಮಿಕರ ಮೇಲೆರೈತರ ಮೇಲೆ ವಿದ್ಯಾರ್ಥಿಗಳ ಮೇಲೆ ನರಗುಂದ ನವಲಗುಂದ ರೈತರ ಮೇಲೆ ನಡೆಸಿದ ದಬ್ಬಾಳಿಕೆ ದೌರ್ಜನ್ಯವನ್ನು ಮರೆಯುವಂತಿಲ್ಲ ಎಂದು ಹೇಳಿದೆ. ಕಾಂಗ್ರೆಸ್ (ಐ) ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ನಡೆಸಿರುವ ಪ್ರಯತ್ನಗಳನ್ನು ವಿಫಲಗೊಳಿಸಬೇಕೆಂದು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ರಾಜ್ಯದ ಜನತೆಗೆ ಕರೆ ನೀಡಿದೆ.

ರಾಜ್ಯದ ರೈತರ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದ ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಸರ್ಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡಿರುವ ಬಡರೈತರ ಭೂಮಿಯನ್ನು ಸಕ್ರಮಗೊಳಿಸಲು ರಾಜ್ಯಸರ್ಕಾರ ಆದ್ಯತೆ ನೀಡಬೇಕೆಂದು "ಸಿ" ಮತ್ತು "ಡಿ" ಆರ್ಾ್ಯ ಭೂಮಿಯನ್ನು ಭೂಹೀನರಿಗೆ ಹಂಚಬೇಕೆಂದು ಸರ್ಕಾರಿ ಭೂಮಿಯಲ್ಲಿ ಮನೆಕಟ್ಟಿಸಿಕೊಂಡಿರುವ ಬಡವರಿಗೆ ಹಕ್ಕು ಪತ್ರಗಳನ್ನು ನೀಡಬೇಕೆಂದು ಆಗ್ರಹ ಪಡಿಸಿದೆ.

---

64 ರೈತರ, ಮಹಿಳೆಯರ ಬಂಧನ

ಹುಣಸೂರು ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಬಹು ಸಂಖ್ಯೆಯಲ್ಲಿ ಅನೇಕ ವರ್ಷಗಳಿಂದ ಭೂಹೀನ ರೈತರು ಬಗುರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ. ಇವರು ಸಾಗುವಳಿ ಚೀಟಿಗಾಗಿ ತಹಸೀಲ್‌ದಾರರಲ್ಲೂ ಸರ್ಕಾರದ ಮೇಲೂ ಒತ್ತಾಯ ತರುತ್ತಿದ್ದಾರೆ,

ಹುಣಸೂರು ತಾಲ್ಲೂಕು ಶೆಟ್ಟಹಳ್ಳಿ ಎಲ್ಲೆಗೆ ಸೇರಿದ ಸರ್ವೆ ನಂಬರ್ 11, 12, 13, 14ರಲ್ಲಿ ಹಲವಾರು ರೈತರು ಸಾಗುವಳಿ ಚೀಟಿ ಪಡೆದು ಸಾಗುವಳಿ ಮಾಡುತ್ತಿದ್ದಾರೆ. ಇವರ ಜೊತೆ ಬಗುರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಹೀನ ರೈತರು ಇದ್ದಾರೆ.

ಸುಮಾರು ಎರಡು ನೂರ ಕುಟುಂಬದವರು ಈ ಸರ್ವೆ ನಂಬರ್‌ಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಸಾಗುವಳಿ ಭೂಮಿಯನ್ನು ಹದಮಾಡಲು ಪ್ರಾರಂಭಿಸುತ್ತಿರುವಾಗ ಅರಣ್ಯಾಧಿಕಾರಿಗಳು ಮತ್ತು ಪೋಲೀಸರು ಸೇರಿ 26-4-88 ರಂದು ಏಕಾಏಕಿ ಈ ರೈತರ ಮೇಲೆ ದೌರ್ಜನ್ಯ ನಡೆಸಿ ಅವರನ್ನು ಸಾಗುವಳಿ ಮಾಡುತ್ತಿರುವ ಭೂಮಿಯಿಂದ ಓಡಿಸಿ ಅವರ ಗುಡಿಸಲುಗಳನ್ನು ಕೆಡವಿ ಮನೆಯಲ್ಲಿದ್ದ ಪಾತ್ರೆ ಪದಾರ್ಥಗಳನ್ನು ವಶಕ್ಕೆ ತೆಗೆದುಕೊಂಡುದಲ್ಲದೆ ವ್ಯವಸಾಯ ಉಪಕರಣಗಳಾದ ಕಡಕತ್ತಿ, ಕುಡುಗೋಲ ಅವರಲ್ಲಿ ಕೆಲವರಲ್ಲಿದ್ದ ದಾಖಲೆ ಪತ್ರಗಳನ್ನು ಪಶಪಡಿಸಿಕೊಂಡು 4 ಕೈಕೂಸುಗಳು ಸೇರಿದಂತೆ 13 ಜನ ಹೆಂಗಸರನ್ನು 64 ಜನ ಗಂಡಸರನ್ನು ಬಂಧಿಸಿ ಪೋಲೀಸ್ ಠಾಣೆಯಲ್ಲಿ ಇಟ್ಟಿದ್ದು, ದಿನಾಂಕ 27-4-88 ರಂದು ಇವರನ್ನೆಲ್ಲಾ ನ್ಯಾಯಾಲಯದ ಮುಂದೆ ಹಾಜರ ಪಡಿಸಿ ಹೆಂಗಸರು ಮಕ್ಕಳನ್ನು ಬಿಟ್ಟು ಉಳಿದ ಗಂಡಸರನ್ನೆಲ್ಲಾ ಬಂಧಿಖಾನೆಗೆ ಕಳುಹಿಸಲಾಗಿದೆ.

Printed & Published by P. Ramachandra Rao on be half of the Communist Party of India [Maxist] Karnataka State Committe. K.V. Temple Street, Sultanpet, Banore-560053 Editorial and Managerial Office: L-56at K.V.TempleStreet, Sultanpet B-53
Phone: 75331 ARASA Mudrana B-40 Editor: P. Ramachandra Rao Managing Editor: N.K.Upadhyaya